# ಅಪರಂಜಿ

ತಿಳಿನಗೆಯ ಕಾರಂಜಿ



ಡಿಸೆಂಬರ್ - 2011





# ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 29
ಸಂಚಿಕೆ - 3
ಡಿಸೆಂಬರ್ - 2011

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಮೆಟ್ರೋ ಮೆಟ್ರೋ | **ವತ್ಸನ** | 5 |
| ಸರ್ ನೇಮ್, ಫಸ್ಟ್... | | 11 |
| ಸಹವಾಸ ದೋಷ | **ಗಣೇಶ ಹೆಗ್ಗಡೆ** | 14 |
| ಬದುಕಿದೆಯಾ.... | **ಡಾ|| ಡಿ.ವಿ. ಗುರುಪ್ರಸಾದ್** | 18 |
| ಸಂಸ್ಕೃತದಲ್ಲಿ ಹಾಸ್ಯ | **ಮಹಾಬಲ ಭಟ್** | 21 |
| ಅಜ್ಜಿ ಕತೆಗಳು | | 24 |
| ತುಂತುರು | **ದಂನಾ** | 29 |
| ಕೆಲಸವಿದ್ದ ಬಡಗಿ... | **ವಾಣೀ ಸುರೇಶ್** | 30 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 33 |
| ಕೊಂಬೆ ಕತ್ತರಿಸಿದ...... | **ನಾಗೇಶ ಹೆಗಡೆ** | 36 |
| ಮಾಸ ಭವಿಷ್ಯ | **ಸತ್ಯೋತ್ತಮಾಚಾರ್ಯ** | 39 |


*ಮುದ್ರಣ:* ರವಿ ಗ್ರಾಫಿಕ್ಸ್ - *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



''ಪಕ್ಷಕ್ಕೆ ಚೂರಿ ಹಾಕುವುದಿಲ್ಲ'' – ಮಾಜಿ ಮುಖ್ಯ ಮಂತ್ರಿಗಳು

**● ಇನ್ನಾರಿಗೆ ಹಾಕುತ್ತಾರಂತೆ ??**

★★★

ಕನಕದಾಸರ ಬದುಕು ಅನುಕರಣೀಯ – ಹೇಳಿಕೆ

**● ಅರಣ್ಯರೋದನ ಅಂದರೆ ಇದೇ !!**

★★★

ನನ್ನ ತಂದೆಗೆ ಭಾರತರತ್ನ ನೀಡಿ – ದೀಪಿಕಾ

**● ಹಲವು ಆತ್ಮಗಳು ಬೆಚ್ಚಿದ್ದುವಂತೆ !!**

★★★

''ಬೆದರಿಸಿಲ್ಲ, ಎಚ್ಚರಿಸಿದೆ'' – ಮಾಜೀ ಪ್ರಧಾನಿ

**● ಅಪರಂಜಿ ನಿಘಂಟು ಹುಡುಕುತ್ತಿದ್ದಾಳಂತೆ !!**

★★★

ಪೋಲೀಸ್ ಕಾವಲಿನಲ್ಲಿ ದತ್ತಮಾಲೆ – ಸುದ್ದಿ

**● ಟೀಕೆ ಅನಗತ್ಯ !!**

★★★

ವರುಣ್ ಗಾಂಧಿಯತ್ತ ಬೂಟು – ಸುದ್ದಿ

**● ಅದೂ ಒಂದು ಅಭಿಪ್ರಾಯ ಅಷ್ಟೇ !!**

★★★

ತ್ಯಾಜ್ಯ ನಿರ್ವಹಣೆಗೆ ಮುಂದಾಗಿ – ಹೇಳಿಕೆ

**● ಭ್ರಷ್ಟ ರಾಜಕಾರಣಿಗಳನ್ನೂ.......... !!**

★★★

ಹೊಸ ಲೋಕಾಯುಕ್ತರನ್ನು ಹುಡುಕಲು ವೆಬ್‌ಸೈಟ್ ಬಳಸುತ್ತಾರೆ ಎಂಬುದೇ ಶುದ್ಧ ಕುಹಕ.

★★★

# ಕೊರವಂಜಿ ಅಪರಂಜಿ ಟ್ರಸ್ಟ್

## ಬೆಂಗಳೂರು

**ಅರ್ಪಿಸುವ**

## ಬಹು ಭಾಷಾ ವೈವಿಧ್ಯತೆಯ ಹಾಸ್ಯೋತ್ಸವ 2011

## 25.12.2011 ~ ಭಾನುವಾರ ~ ಬೆಳಗ್ಗೆ 10 ರಿಂದ

## ಸ್ಥಳ: ಎಬ್ಬಿನ್ ಕಲಾಕ್ಷೇತ್ರ, ಜಯನಗರ, ಬೆಂಗಳೂರು

| | |
|---|---|
| ಚಾಲನೆ ಮತ್ತು ತಮಿಳು ಹಾಸ್ಯ ವೈವಿಧ್ಯ | – ಶ್ರೀ ಹಿರೇಮಗಳೂರು ಕಣ್ಣನ್ |
| ತೆಲುಗು ಹಾಸ್ಯ ಲಾಲಿತ್ಯ | – ಶ್ರೀ ಅ.ರಾ. ಮಿತ್ರ |
| ಸಂಸ್ಕೃತ ಹಾಸ್ಯ ವಿಶೇಷ | – ಡಾ. ವಿ.ಬಿ. ಆರತಿ |
| ಮರಾಠಿ ಹಾಸ್ಯ ಮಾಧುರ್ಯ | – ಡಾ. ಚಂದ್ರಕಾಂತ ಪೋಕಳೆ |
| ಮಲಯಾಳಂ ಹಾಸ್ಯ ವಿಶೇಷ | – ಶ್ರೀ ಬೇಬಿ ಎಂ ಮಾಣಿಯಾಟ್ |

**ಇದರ ಜೊತೆಗೆ**

| | |
|---|---|
| ತೆಲುಗು ಭಾಷೆಗೊಂದು ವಿಶೇಷ ಒಗ್ಗರಣೆ | – ಶ್ರೀ ರವಿ ಬೆಳಗೆರೆ |
| ನೆರಳು ಬೆಳಕಿನ ಆಟ | – ಶ್ರೀ ಪ್ರಹ್ಲಾದ್ ಆಚಾರ್ಯ |

ಗೌರವ ಸಮರ್ಪಣೆ

**ಪ್ರೊ. ಅ.ರಾ. ಮಿತ್ರ** ಅವರಿಗೆ

**ಶ್ರೀ ಎಂ.ಆರ್. ಸುಬ್ಬರಾಮ್ ನೇತೃತ್ವದ**

ಗಾನವಿನೋದಿನಿ ತಂಡದಿಂದ ಹಾಸ್ಯ – ಗಾನ – ಮಾಧುರ್ಯ

ಉಸ್ತುವಾರಿ

**ಪ್ರೊ. ಎಂ. ಕೃಷ್ಣೇಗೌಡ ಮತ್ತು ಶ್ರೀ ಬೇಲೂರು ರಾಮಮೂರ್ತಿ**

## ನಿಮಗೆಲ್ಲ ಆದರದ ಸ್ವಾಗತ

**ಶ್ರೀ ಬೇಲೂರು ರಾಮಮೂರ್ತಿ**
**ಶ್ರೀ ಕೆ. ರಾಜಗೋಪಾಲ್**
ಸಂಚಾಲಕರು

**ಶ್ರೀ ಎಂ. ಶಿವಕುಮಾರ್**
ಮ್ಯಾನೇಜಿಂಗ್ ಟ್ರಸ್ಟಿ
ಕೊರವಂಜಿ ಅಪರಂಜಿ ಟ್ರಸ್ಟ್

# ಶ್ರದ್ಧಾಂಜಲಿ

## ಶ್ರೀಯುತ ಜಿ. ನಾರಾಯಣ

ವಿನೋದ ನಗೆ ಮಾಸಪತ್ರಿಕೆಯ ಸಂಸ್ಥಾಪಕ ಸಂಪಾದಕರೂ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ ಆಗಿದ್ದ ಮಾನ್ಯ ಶ್ರೀ ಜಿ. ನಾರಾಯಣ ಅವರು ಇನ್ನಿಲ್ಲ. ನಮ್ಮ ತಂದೆ ರಾ.ಶಿ. ಅವರ ಕಾಲದಿಂದ ಮಾನ್ಯರು ನಮ್ಮೆಲ್ಲರಿಗೂ ಪರಿಚಿತರಾಗಿದ್ದರು. ವಿನೋದ ಪತ್ರಿಕೆಯನ್ನು ಮೊದಲು ಪ್ರಾರಂಭಿಸಿದಾಗ ಅದನ್ನು ಅನಾವರಣ ಮಾಡಿದ್ದು ರಾ.ಶಿ. ಅವರೇ. ಅಪರಂಜಿಯ ಹತ್ತುವರ್ಷದ ಹಬ್ಬದಲ್ಲಿ ಮಾನ್ಯ ಜಿ. ನಾರಾಯಣ ಅವರು ಮುಖ್ಯ ಅತಿಥಿಯಾಗಿ ಬಂದು ತಮ್ಮ ಆಶೀರ್ವಚನ ನೀಡಿದ್ದರು. ನಾನೊಮ್ಮೆ ವಿನೋದ ಪತ್ರಿಕೆಯ ಸಮಾರಂಭದಲ್ಲಿ ಭಾಗವಹಿಸಿದ್ದೆ. ಆಗ ಅವರು ನನ್ನ ಬಗ್ಗೆ ತೋರಿಸಿದ ವಾತ್ಸಲ್ಯ, ಅಭಿಮಾನ ಇಂದಿಗೂ ಮರೆಯಲಾರೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಶ್ರೀಯುತರು ಮೊದಲಿನಿಂದಲೂ ಮಹಾತ್ಮ ಗಾಂಧಿಯವರ ಮೌಲ್ಯಗಳನ್ನು ಪಾಲಿಸಿಕೊಂಡು ಬಂದವರು. ಇಂತಹ ಹಿರಿಯ ಚೇತನ ನಮ್ಮೆಲ್ಲರಿಗೂ ಮುಂದೆಯೂ ದಾರಿದೀಪವಾಗಿ ಆಶೀರ್ವದಿಸಲಿ ಎಂದು ಅಪರಂಜಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ.

## ಶ್ರೀಯುತ ನಾಗೂಶ್ರೀ ಸೂರಿ (ಜಿ.ಎಸ್. ಸೂರ್ಯನಾರಾಯಣ)

ನಾಗೂಶ್ರೀ ಸೂರಿ ಎಂಬ ಕಾವ್ಯನಾಮದಿಂದ ಅಪರಂಜಿಗೆ ಅನೇಕ ಉತ್ತಮ ನಗೆ ಲೇಖನಗಳನ್ನು ಬರೆದಿದ್ದ ಸ್ನೇಹಜೀವಿ, ನನ್ನ ಬಾಲ್ಯದ ಗೆಳೆಯ ಸೂರಿ ಇನ್ನಿಲ್ಲ. ಸೂರಿ ನನ್ನಂತೆಯೇ ಇಂಜಿನಿಯರ್. ವ್ಯಂಗ್ಯ ಚಿತ್ರಗಳನ್ನು ರಚಿಸುವುದರಲ್ಲಿ ಇವನಿಗೆ ಇದ್ದ ಪ್ರತಿಭೆಯನ್ನು ಗುರುತಿಸಿ ಅಪರಂಜಿಗೆ ಇವನಿಂದ ಅನೇಕ ಚಿತ್ರಗಳನ್ನು ಬರೆಸಿದ್ದೆ. ಇವನ ನಗೆಬರಹಗಳು ಹಾಗೂ ಅಣಕವಾಡುಗಳು ಬಹು ಚೆನ್ನಾಗಿ ಮೂಡಿ ಬರುತ್ತಿದ್ದವು. ಕೇವಲ ಒಂದು ವಾರದ ಹಿಂದೆ ನಾವು ಹಲವು ಗೆಳೆಯರು ಮೆಟ್ರೋದಲ್ಲಿ ಒಮ್ಮೆ ಪ್ರಯಾಣ ಮಾಡಿಬಿಡೋಣ ಎಂದು ನಿರ್ಧರಿಸಿ ಹೊರಟಾಗ ಸೂರಿ ನಮ್ಮೊಡನಿದ್ದು ತನ್ನ ನಗೆ ಚಟಾಕಿಗಳನ್ನು ಹಾರಿಸುತ್ತಿದ್ದ. ಮಂತ್ರಾಲಯಕ್ಕೆ ದರ್ಶನಾಕಾಂಕ್ಷಿಯಾಗಿ ಮನೆಯವರೊಂದಿಗೆ ತೆರಳಿ ರೈಲಿನಲ್ಲಿ ಹಿಂತಿರುಗುವಾಗ ತೀರ ಅನಾಯಾಸವಾಗಿ ಎಲ್ಲರಿಗೂ ವಿದಾಯ ಹೇಳಿ ಭವಬಂಧನಗಳನ್ನು ಕಳಚಿಕೊಂಡು ಹೊರಟುಬಿಟ್ಟ ಗೆಳೆಯ ಸೂರಿ.

ಅಗಲಿದ ಬರಹಗಾರನಿಗೆ ಶ್ರದ್ಧಾಂಜಲಿಯನ್ನು ಅಪರಂಜಿ, ಬಳಗದ ಎಲ್ಲರ ಪರವಾಗಿ ಅರ್ಪಿಸುತ್ತಾಳೆ.

**– ಸಂಪಾದಕರು**



# ಮೆಟ್ರೋ ಮೆಟ್ರೋ ಮೆಟ್ರೋ

**- ವತ್ಸನ**

**ಎ**ರಡು ವರ್ಷಗಳ ಹಿಂದೆ ಶರಲೇಖನೊಡನೆ ವಿರಾಜಪೇಟೆಗೆ ಹೋಗಿ ಬಂದ ಹೊಸದರಲ್ಲಿ ಒಂದು ದಿನ ಅವನು 'ನಾನು ಅರ್ಜೆಂಟಾಗಿ ದೆಹಲಿಗೆ ಹೋಗಬೇಕಾಗಿದೆ. ತೀರ ಮಹತ್ವದ ಕೆಲಸ. ಎಲ್ಲಿಗ್ಗೆ ಹೋಗ್ತೀಯ, ಯಾವಾಗ ಬರ್ತೀಯ ಅಂತ ಕೇಳಬೇಡ. ಸಾಧ್ಯವಾದರೆ ನಾನೇ ನಿನಗೆ ಪತ್ರ ಬರೀತೀನಿ.' ಅಂತ ನನಗೆ ವಿದಾಯ ಹೇಳಿ ಉತ್ತರಾಭಿಮುಖವಾಗಿ ಹೊರಟೇಬಿಟ್ಟ. ಹಲವು ತಿಂಗಳಲ್ಲಿ ಹಿಂತಿರುಗುತ್ತಾನೆ, ಆಮೇಲೆ ಅವನ ಇನ್ನೂ ಒಂದು ಹೊಸ ಸಾಹಸವನ್ನು ದಾಖಲಿಸಿದರಾಯಿತು ಅಂದುಕೊಂಡು ನಾನು ನನ್ನ ವೈದ್ಯ ವೃತ್ತಿಯಲ್ಲಿ ಮಗ್ನನಾದೆ. ಆರು ತಿಂಗಳಾದರೂ ಅವನ ಸುಳಿವಿಲ್ಲ. ಆಳ ಮನಸ್ಸಿನಲ್ಲಿ ಒಂದು ವಿಧವಾದ ಆತಂಕ ಶುರುವಾಯಿತು. ಗೆಳೆಯ ಯಾವ ಪರಿಸ್ಥಿತಿಯಲ್ಲಿ ಸಿಲುಕಿ ಎಂತಹ ಅಪಾಯವನ್ನು ತನ್ನ ಮೇಲೆ ಎಳೆದುಕೊಂಡಿರುತ್ತಾನೋ ಎಂಬ ಚಿಂತೆ ಬೆಳಗಿನ ಜಾವದ ಸಮಯದಲ್ಲಿ ಕಾಡತೊಡಗಿತು. ಕೊನೆಗೆ ಡಿಸೆಂಬರ್ 2010ರ ಸುಮಾರಿನಲ್ಲಿ ದೆಹಲಿಯಿಂದ ನನಗೆ ಒಂದು ಪತ್ರ ಬಂದಿತು. ಶರಲೇಖನದೇ ಇರಲಪ್ಪಾ ಎಂದು ಪ್ರಾರ್ಥಿಸುತ್ತಾ ಲಕ್ಕೋಟೆ ತೆರೆದೆ. ಒಂದು ಪುಟ್ಟ ಬಿಳೀ ಹಾಳೆ. ಅದರ ಮಧ್ಯೆ ನಾಲ್ಕು ಸಾಲಿನ ಒಂದು ಪದ್ಯ. ಬರೆದವರ ಸುದ್ದಿ ಸುಳಿವು ಏನೂ ಇಲ್ಲ. ಕವನ ಹೀಗಿತ್ತು.

ಗೆಳೆಯನ ಬಹುದಿನ ಕಾಣದ ಕಾರಣ
ತಲ್ಲಣವೇತಕೆ ಬಿಡು ಬಿಡು ಹುಚ್ಚ
ಭ್ರಷ್ಟರ ತನಿಖೆಯ ಕೆಲಸದಿ ನಿರತನು
ಟೂಜೀ ಎನ್ನುವ ತರಂಗಗುಚ್ಛ

ಕವನ ಓದಿ ಅದು ಶರಲೇಖನದೇ ಇರಬೇಕೆಂದು ನಿರ್ಧರಿಸಿದನಂತರ ಇನ್ನೊಂದು ಆತಂಕ ಶುರುವಾಯಿತು. ದೆಹಲಿಯಲ್ಲಿ ಈ ಟೂಜೀ ಸ್ಕಾಮಿನಲ್ಲಿ ಈ ಅಮಾಯಕ ಸಿಲುಕಿ ಕೊನೆಗೆ ಅವನ ಮೇಲೇ ಸಿ.ಬಿ.ಐ.ನವರು ಆರೋಪ ಹೊರಿಸಿದರೆ ಏನು ಗತಿಯಪ್ಪಾ ಎನ್ನಿಸಿತು. ಮನೆದೇವರಿಗೆ ಹರಸಿಕೊಂಡು ಶರಲೇಖನ ಹಿಂದಿರುಗುವಿಕೆಯನ್ನೇ ಕಾಯುತ್ತಾ ಯಾಂತ್ರಿಕವಾಗಿ ದಿನನಿತ್ಯದ ಕೆಲಸಗಳಲ್ಲಿ ತೊಡಗಿಸಿಕೊಂಡೆ.

ಈ ವರ್ಷದ ನವೆಂಬರ್ ಹದಿನೈದು ನನ್ನ ಜೀವನದಲ್ಲಿ ಅತ್ಯಂತ ಮಹತ್ವದ ದಿನ. ಅಂದು ಬೆಳಗ್ಗೆ ನನ್ನ ಮೊಬೈಲ್ ತನ್ನ ಕಾಲರ್ ಟ್ಯೂನನ್ನು ಅತಿ ಮಧುರವಾಗಿ ನುಡಿಸಲು ತೊಡಗಿದಾಗ ಆ ತುದಿಯಲ್ಲಿನ ವ್ಯಕ್ತಿ ಯಾರಿರಬಹುದೆಂದು ನನಗೆ ಕಿಂಚಿತ್ತೂ ತಿಳಿದಿರಲಿಲ್ಲ. ಕರೆಯನ್ನು

ಸ್ವೀಕರಿಸಿದಾಗ ಆ ತುದಿಯಿಂದ ಹೊರಹೊಮ್ಮಿದ ವಾಣಿ ಶರಲೇಖನದ್ದಾಗಿತ್ತು. 'ವತ್ಸನ, ಇವತ್ತು ಬೆಳಗ್ಗೆ ಹನ್ನೊಂದೂವರೆಗೆ ಸ್ವಾಮಿ ವಿವೇಕಾನಂದ ರಸ್ತೆ ಮೆಟ್ರೋ ಸ್ಟೇಷನ್ನಿನಲ್ಲಿ ನಿನ್ನನ್ನು ಭೇಟಿಯಾಗುವೆ. ಮುಂಚಿತವಾಗಿ ತಿಳಿಸಲು ಆಗಲಿಲ್ಲ, ಬರುತ್ತೀಯಾ ತಾನೆ?' ಎಂದು ಶರಲೇಖ ಕೇಳಿದ. ಎರಡೂವರೆ ವರ್ಷಗಳಿಂದ ಕಾಣಸಿಗದ ಗೆಳೆಯನ ಅಪೂರ್ವ ಭೇಟಿಗೆ ಯಾರಾದರೂ ಇಲ್ಲ ಅನ್ನುತ್ತಾರೆಯೇ. 'ಖಂಡಿತ ಬರುತ್ತೇನೆ ಮಾರಾಯಾ. ಅಲ್ಲೇ ಇರು ಒಂದು ಹತ್ತು ನಿಮಿಷ ತಡವಾದರೆ ಓಡಿಬಿಡಬೇಡ ' ಅಂತ ಹೇಳಿ, ಮನೆಯಿಂದ ಹೊರಟು ಆಟೋ ಏರಿದೆ.

ಮಹಾತ್ಮ ಗಾಂಧಿ ರಸ್ತೆ ಮೆಟ್ರೋ ಸ್ಟೇಷನ್ ಒಳಗೆ ನಾನು ಕಾಲಿಟ್ಟದ್ದು ಇದೇ ಮೊದಲ ಬಾರಿ. ಟಿಕೆಟ್ ಖರೀದಿಸಿದಾಗ ಒಂದು ಪ್ಲಾಸ್ಟಿಕ್ ಟೋಕನ್ ಕೊಟ್ಟರು. ಅದನ್ನು ಪ್ರವೇಶದ್ವಾರದಲ್ಲಿರುವ ಗಾಜಿನ ದೀಪದ ಮೇಲೆ ಇಟ್ಟ ತಕ್ಷಣ ಬಾಗಿಲು ಪಕ್ಕಕ್ಕೆ ಸರಿದು ನನ್ನನ್ನು ಒಳಕ್ಕೆ ಬಿಟ್ಟಿತು. ಫ್ಲಾಟ್ ಫಾರ್ಮಿನ ಗಡಿಯಾರ ಮುಂದಿನ ರೈಲು ಹನ್ನೊಂದೂ ಕಾಲಿಗೆ ಅಂತ ಸೂಚಿಸುತ್ತಿತ್ತು. ಫ್ಲಾಟ್ ಫಾರ್ಮಿನ ಅಂಚಿನಲ್ಲಿ ನಿಂತಿದ್ದ ಬಿಳೀ ಚೂಡಿದಾರ್ ಸಹಾಯಕಿ ಜನಗಳನ್ನು ಹಳದಿ ಅಂಚಿನ ಹಿಂದೆ ನಿಲ್ಲುವಂತೆ ಮನವೊಲಿಸುತ್ತಿದ್ದಳು. ದೂರದ ವಿಧಾನ ಸೌಧದ ಬುರುಜಿನಿಂದಲೇ ಬರುತ್ತಿದೆಯೇನೋ ಅನ್ನುವಂತೆ ನಮ್ಮ ರೈಲು ಆ ದಿಕ್ಕಿನಿಂದ ಬಂದು ನಿಂತಿತು. ನಾನು ಒಳಕ್ಕೆ ನಡೆದು ಲೋಹದ ಆಸನದ ಮೇಲೆ ಕುಳಿತೆ. ಅವತ್ತು ವಾರದ ದಿನವಾದ್ದರಿಂದ ಅಷ್ಟೇನೂ ಜನಸಂದಣಿ ಇರಲಿಲ್ಲ. ಟ್ರಿನಿಟಿ, ಹಲಸೂರು, ಇಂದಿರಾನಗರ ದಾಟಿ ಸ್ವಾಮಿ ವಿವೇಕಾನಂದ ರಸ್ತೆಯ ಸ್ಟೇಷನ್ ತಲುಪಿದಾಗ ಹನ್ನೊಂದೂ ಇಪ್ಪತ್ತೈದು. ನಾನು ಇಳಿಯುವ ಸನ್ನಾಹ ನಡೆಸುತ್ತಿದ್ದಂತೆಯೇ ನನ್ನ ಹಿಂದಿನಿಂದ ಒಬ್ಬ ವ್ಯಕ್ತಿ 'ಯಾಕಷ್ಟು ಅವಸರ ಇಳಿಯುಕ್ಕೆ?' ಅಂತ ಕೇಳಿದ. ಶರಲೇಖನ ದನಿಯನ್ನ ಹೇಗೆ ಗುರುತಿಸದಿರಲು ಸಾಧ್ಯ? ಪರಸ್ಪರ ತಬ್ಬಿ , ಕೈ ಕುಲುಕಿ, ನನಗೆ ಅರಿವಿಲ್ಲದೆಯೇ ಚಿಮ್ಮಿದ ಕಣ್ಣೀರನ್ನು ಒರೆಸಿಕೊಂಡು 'ಗಾಡಿಯಿಂದ ಇಳಿದು ಮಾತನಾಡೋಣವೇ?' ಎಂದು ನಾನು ಕೇಳಿದಾಗ ಶರಲೇಖ ಪುನಃ ಕುಳಿತುಕೊಳ್ಳುತ್ತಾ 'ನಮ್ಮ ಸ್ಟೇಷನ್ ಬೈಯ್ಯಪ್ಪನ ಹಳ್ಳಿ. ಇಲ್ಲಿಂದಲೇ ನಿನ್ನ ಜೊತೆ ಬರೋಣ ಅಂದುಕೊಂಡು ಇಲ್ಲಿಗೆ ಬರಲು ಹೇಳಿದೆ. ಇಳಿದ ಮೇಲೆ ಮಾತನಾಡೋಣ' ಅಂತ ಹೇಳಿ ಶರಲೇಖ ಮೌನ ವಹಿಸಿದ. ಅವನ ನಡವಳಿಕೆಯ ಬಗ್ಗೆ ಚೆನ್ನಾಗಿ ಪರಿಚಯವಿದ್ದದ್ದರಿಂದ ನಾನು ಮಾತನ್ನು ಮುಂದುವರಿಸಲಿಲ್ಲ.

ಬೈಯ್ಯಪ್ಪನ ಹಳ್ಳಿ ಮೆಟ್ರೋದ ಟರ್ಮಿನಸ್. ಅಲ್ಲಿಗೆ ತಲುಪಿದಾಗ ಗಾಡಿಯಲ್ಲಿದ್ದ ಎಲ್ಲರೂ ಇಳಿದರು. ಶರಲೇಖ ಮಾತ್ರ ಕೂತೇ ಇದ್ದ. ನನ್ನನ್ನೂ ಕುಳಿತಿರಲು ಹೇಳಿದ. ಮೆಟ್ರೋ ಉಸ್ತುವಾರಿದಾರ 'ಇದ್ಯಾವ ಹಳ್ಳೀ ಮುಕ್ಕರು' ಎಂಬ ತಿರಸ್ಕಾರ ತುಂಬಿದ ಅಸಹನೆಯಿಂದ ನಮ್ಮ ಬಳಿ ಬಂದ. ಶರಲೇಖನ ಕತ್ತಿನಿಂದ ತೂಗುತ್ತಿದ್ದ ವಿಶೇಷ ಐಡಿಕಾರ್ಡನ್ನು ನೋಡಿ ಅವನಿಗೆ ಸಲ್ಯೂಟ್ ಹೊಡೆದು ಹಿಂತಿರುಗಿದ. ಗಾಡಿ ಷೆಡ್ಡಿನ ಕಡೆ ಹೊರಟಿತು. ಷೆಡ್ಡಿನಲ್ಲಿ ನಾವಿಬ್ಬರೂ, ಚಾಲಕನೊಂದಿಗೆ ಗಾಡಿಯಿಂದ ಇಳಿದೆವು. ಅದೊಂದು ಗವಿಯಂತಹ ಷೆಡ್ಡು.

ಒಂದು ಕೊನೆಯಲ್ಲಿ ಲಿಫ್ಟ್ ಬಾಗಿಲುಗಳು. ನಾವು ಒಂದು ಲಿಫ್ಟನ್ನು ಹೊಕ್ಕು ನೆಲಮಾಳಿಗೆ ಸೇರಿದೆವು. ಅಲ್ಲಿಂದ ಒಂದು ಉದ್ದನೆಯ ಕಾರಿಡಾರಿನಲ್ಲಿ ನಡೆದು ಒಂದು ಭವ್ಯವಾದ ಆಫೀಸಿಗೆ ಬಂದೆವು. ಅತ್ಯಂತ ಶ್ರೀಮಂತಿಕೆಯಿಂದ ಸುಸಜ್ಜಿತವಾಗಿದ್ದ ಆ ಆಫೀಸಿನಲ್ಲಿದ್ದ ಸೋಫಾಮೇಲೆ ನನ್ನನ್ನು ಕುಳ್ಳಿರ ಹೇಳಿ ತಾನೂ ಆಸೀನನಾದ ಶರಲೇಖ.

'ಏನಿದೆಲ್ಲಾ ವ್ಯವಹಾರ? ದೆಹಲಿಯಿಂದ ಹಿಂತಿರುಗಿದ್ದು ಯಾವಾಗ? ಇಲ್ಲಿ ಯಾವಾಗ ಕೆಲಸಕ್ಕೆ ಸೇರಿದೆ?' ಸಾವಿರಾರು ಪ್ರಶ್ನೆಗಳ ಸುರಿಮಳೆಯನ್ನೇ ಗರೆದೆ (?). ಶರಲೇಖ ಸಾವಧಾನದಿಂದ ' ವತ್ಸನ, ಮೊಟ್ಟಮೊದಲಿಗೆ ಇಷ್ಟು ದೀರ್ಘ ಅವಧಿಯ ನಂತರ ನಿನ್ನ ಭೇಟಿ ಎಷ್ಟು ಸಂತಸದಾಯಕ ಗೊತ್ತೇ. ಇರಲಿ. ನಾನು ದೆಹಲಿಗೆ ಹೋಗಿದ್ದು ನಮ್ಮ ದೇಶದ ಅಗ್ರಗಣ್ಯ ಪತ್ತೇದಾರಿ ಸಂಸ್ಥೆಯ ಕೋರಿಕೆಯ ಮೇರೆಗೆ. ಈ ವರ್ಷದ ಪ್ರಾರಂಭದ ಹೊತ್ತಿಗೆ ನನ್ನ ಕೆಲಸ ಎಲ್ಲಾ ಸುಮಾರಾಗಿ ಮುಗಿದು ಫೆಬ್ರವರಿ ಎರಡನೆಯ ತಾರೀಖು ಒಬ್ಬ ಅತಿ ಮುಖ್ಯ ಅಪರಾಧಿಯ ದಸ್ತಗಿರಿ ಆದನಂತರ ನಾನು ಬೆಂಗಳೂರಿಗೆ ಹಿಂತಿರುಗಲು ಅನುಮತಿ ಕೇಳಿದೆ. ಅಷ್ಟು ಹೊತ್ತಿಗೆ ಬೆಂಗಳೂರು ಪೋಲೀಸರಿಂದ ನನಗೊಂದು ಕೋರಿಕೆ ಬಂತು. ನಮ್ಮ ನಾಡಿನ ಹೆಮ್ಮೆಯ 'ನಮ್ಮ ಮೆಟ್ರೋ' ಯೋಜನೆಗೆ ಒಬ್ಬ ನುರಿತ ಪತ್ತೇದಾರನ ಅಗತ್ಯ ಇರುವುದರಿಂದ ಒಂದು ವರ್ಷದ ಮಟ್ಟಿಗೆ ಅವರಿಗೆ ಸಹಾಯ ಹಸ್ತ ನೀಡಲಾಗುವುದೇ ಅಂತ ಆ ಕೋರಿಕೆಯ ಸಾರಾಂಶ. ನನಗೆ ಇಲ್ಲ ಎನ್ನಲಾಗದೇ ನನ್ನ ಅಜ್ಞಾತವಾಸ ಮುಂದುವರಿಸಿದೆ. ಇಲ್ಲಿ ಬೆಂಗಳೂರಿಗೆ ಬಂದು ಮೆಟ್ರೋ ಮುಖ್ಯಸ್ಥರನ್ನು ಭೇಟಿಮಾಡಿದೆ....... ಎಂದು ಶರಲೇಖ ಹೇಳುತ್ತಿರುವಾಗಲೇ ನಾನು ಮಧ್ಯೆ ಬಾಯಿಹಾಕಿದೆ.

'ಅರರೇ, ಮೆಟ್ರೋ ಅಂತಹ ಸಾರಿಗೆ ಸಂಸ್ಥೆಗೂ ನಿನ್ನ ಪತ್ತೇದಾರಿ ಕೌಶಲ್ಯಕ್ಕೂ ಎಲ್ಲಿಂದೆಲ್ಲಿಯ ಸಂಬಂಧ? ಸ್ವಲ್ಪ ವಿವರಿಸಿ ಹೇಳು ಮಾರಾಯಾ' ಅಂತ ಕೇಳಿಕೊಂಡೆ.

'ಆಯ್ತು ಹೇಳ್ತೀನಿ. ನಿನಗೇ ತಿಳಿದಿರೋ ಹಾಗೆ ಈ ಮೆಟ್ರೋ ಕೆಲಸ ಕಳೆದ ಮೂರು ವರ್ಷಗಳಿಂದ ಅತಿ ನಿಧಾನವಾಗಿ ಆಮೆಯ ಗತಿಯಿಂದ ಸಾಗ್ತಾ ಇದೆ. ನಿನಗೆ ಗೊತ್ತಿಲ್ಲದೇ ಇರೋ ವಿಷಯ ಅಂದ್ರೆ ಈ ವರ್ಷದ ಪ್ರಾರಂಭದಲ್ಲಿ ಈ ಕೆಲಸ ಎಲ್ಲಾ ಪೂರ್ತಿ ನಿಲ್ಲುವುದರಲ್ಲಿತ್ತು. ಅದಕ್ಕೆ ನನ್ನ ಕರೆಸಿದ್ದು. ಈ ಮೆಟ್ರೋ ಗಾಡಿಗಳನ್ನ ಒಂದು ಕೊರಿಯನ್ ಸಂಸ್ಥೆ ತಯಾರಿಸಿರೋದು ನಿನಗೆ ತಿಳಿದಿರಬೇಕು. ಅದರ ಒಬ್ಬ ತಂತ್ರಜ್ಞ ಜನವರಿ ತಿಂಗಳಲ್ಲಿ ಟ್ರಾಕ್ ಸಮೀಕ್ಷೆ ಮಾಡುವುದಕ್ಕೋಸ್ಕರ ಬೆಂಗಳೂರಿಗೆ ಬಂದಿದ್ದನಂತೆ. ಆತನ ಹೆಸರು ಕ್ವಾಂಗ್ ಹೋ. ನಮ್ಮ ಮುಖ್ಯಸ್ಥರು ಅವನನ್ನ ನವರಂಗ್ ಟಾಕೀಸಿನ ಹತ್ತಿರ ನಡೀತಿರೋ ಮೆಟ್ರೋ ಕೆಲಸಗಳನ್ನು ವೀಕ್ಷಿಸುವ ಸಲುವಾಗಿ ಅಲ್ಲಿಗೆ ಕರೆದುಕೊಂಡು ಹೋದರಂತೆ. ಅವರು ಹೋದ ದಿನ ಬೆಂಗಳೂರು ಬಂದ್ ಬೇರೆ. ಹಳೆಯ ರೋಮನ್ ಭಗ್ನ ಅವಶೇಷಗಳಂತೆ ಕಾಣುತ್ತಿದ್ದ, ಯಾವ ಕೆಲಸವೂ ನಡೆಯದೇ ಅನಾಥವಾಗಿ ನಿಂತಿದ್ದ ಆ ಕಂಭಗಳನ್ನು ನೋಡಿ ಕ್ವಾಂಗ್ ಹೋ ಅತಿ ಉತ್ಸಾಹದಿಂದ ಅವುಗಳ ಫೋಟೋ ತೆಗೆದದ್ದೇ ಅಲ್ಲದೇ, ಮುಖ್ಯಸ್ಥರನ್ನು ಕುರಿತು 'ಹಳೆಯ ರೋಮನ್ ಸಾಮ್ರಾಜ್ಯ ದಕ್ಷಿಣ ಭಾರತದವರೆಗೆ ವ್ಯಾಪಿಸಿದ್ದು ನನಗೆ ತಿಳಿದೇ ಇರಲಿಲ್ಲ. ಇಂತಹ ಅಮೂಲ್ಯ ಅವಶೇಷಗಳನ್ನು, ರೋಮನ್ ಸಾಮ್ರಾಜ್ಯ ಕುರುಹುಗಳನ್ನು

ಅಕ್ಕರೆಯಿಂದ ಕಾಪಾಡುವ ಬದಲು ಇವುಗಳನ್ನು ಕೆಡವಿ ಇಲ್ಲಿ ನಿಮ್ಮ ಆಧುನಿಕ ಮೆಟ್ರೋ ನಿರ್ಮಿಸಲು ಹೊರಟಿದ್ದೀರಲ್ಲಾ ನಿಮ್ಮ ಸಂವೇದನೆಗೆ ಏನು ಹೇಳೋಣ? ಇವುಗಳನ್ನು ಜೋಪಾನ ಮಾಡಿ ನಿಮ್ಮ ಟ್ರಾಕನ್ನು ಬೇರೆಲ್ಲಾದರೂ ಬದಲಿಸಲು ಆಗದೇ' ಎಂದು ಬಹು ಮುಗ್ಧತೆಯಿಂದ ಕೇಳಿದನಂತೆ. ಮುಖ್ಯಸ್ಥರು ಅವನನ್ನು ಹೇಗೋ ನಿಭಾಯಿಸಿ ತಮ್ಮ ಆಫೀಸಿಗೆ ಹಿಂತಿರುಗಿದ ಮೇಲೆ ನವರಂಗ್ ವಿಭಾಗದ ಫೈಲುಗಳನ್ನು ತರಿಸಿ ನೋಡಿದರೆ ಅವರಿಗೆ ಮತ್ತೊಂದು ಆಶ್ಚರ್ಯ ಕಾದಿತ್ತು. ಫೈಲಿನ ಪ್ರಕಾರ ಆ ವಿಭಾಗದ ಕೆಲಸಗಳೆಲ್ಲವೂ ಮುಗಿದಿದ್ದು, ಎಲ್ಲ ಹಣಗಳೂ ಸಂದಾಯವಾಗಿ ಟ್ರಾಕಿನ ಉದ್ಘಾಟನೆಗೆ ಮಂತ್ರಿಗಳೊಬ್ಬರನ್ನು ಆಹ್ವಾನಿಸುವ ಪ್ರಸ್ತಾಪವೂ ಇತ್ತಂತೆ. ಮುಖ್ಯಸ್ಥರಿಗೆ ಆಗಲೇ ಬೆವರಲು ಶುರುವಾಗಿ ಎಲ್ಲವನ್ನು ಆಮೂಲಾಗ್ರವಾಗಿ ಪತ್ತೆ ಮಾಡಲು ಒಬ್ಬ ದಕ್ಷ ಪತ್ತೇದಾರನ ಅಗತ್ಯವನ್ನು ಕಂಡುಕೊಂಡು ಪೋಲೀಸ್ ಇಲಾಖೆಯ ಮೂಲಕ ನನಗೆ ಹೇಳಿಕಳಿಸಿದರು. ನನ್ನ ಇರವನ್ನು ಗುಪ್ತವಾಗಿಡಲು ಇಲ್ಲಿ ಈ ನೆಲಮಾಳಿಗೆಯಲ್ಲಿ ನನ್ನ ಆಫೀಸನ್ನು ಕೊಟ್ಟಿದ್ದಾರೆ ಅಫಿಷಿಯಲ್ಲಾಗಿ ನಾನು ಇಲ್ಲಿ ಇಲ್ಲವೇ ಇಲ್ಲ. ಆದರೆ ನಾನು ಮೆಟ್ರೋ ವ್ಯಾಪ್ತಿಯಲ್ಲಿ ಎಲ್ಲಿ ಬೇಕಾದರೂ ಹೋಗಿ ಯಾವ ಮಾಹಿತಿಯನ್ನು ಬೇಕಾದರೂ ಸಂಗ್ರಹಿಸಬಹುದು. ಆರು ತಿಂಗಳು ಸತತವಾಗಿ ದುಡಿದು ಎಲ್ಲ ಹುಳುಕನ್ನು ಮೇಲಕ್ಕೆ ತಂದು, ಅದಕ್ಷ ಅದಿಕಾರಿಗಳನ್ನು ವಜಾ ಮಾಡಿಸಿದೆ. ಅಕ್ಟೋಬರ್ ಇಪ್ಪತ್ತರಂದು ರೀಚ್ ಒನ್ ಉದ್ಘಾಟನೆಯಾದ ತಕ್ಷಣ ಮುಖ್ಯಸ್ಥರು ಇಲ್ಲಿಗೆ ಬಂದು ನನ್ನನ್ನು ಹಾರ್ದಿಕವಾಗಿ ಅಭಿನಂದಿಸಿದರು' ಎಂದ ಶರಲೇಖ.

'ಹಾಗಾದರೆ ಇನ್ನು ನಿನ್ನ ಕೆಲಸ ಮುಗಿದಿರಬೇಕಲ್ಲವೇ. ಇನ್ನು ನೀನು ಬನಶಂಕರಿಗೆ ನಮ್ಮ ಫ್ಲಾಟಿಗೆ ಹಿಂತಿರುಗಬಹುದಲ್ಲಾ?' ಅಂತ ಕೇಳಿದೆ.

'ನಾನೂ ಹಾಗೇ ಅಂದುಕೊಂಡಿದ್ದೆ. ಆದರೆ ಮುಖ್ಯಸ್ಥರು ನೀವು ಬನಶಂಕರಿಗೆ ಹಿಂತಿರುಗೋದು ನಮ್ಮ ಮೆಟ್ರೋದಲ್ಲೇ ರೀಚ್ ಟೂ ಮುಗಿಯೋವರೆಗೂ ಇಲ್ಲೇ ಇದ್ದುಬಿಡಿ ಅಂತ ಗೋಗರೆದರು. ನಾನೇನು ಮಾಡಲಿ' ಅಂತ ಶರಲೇಖ ತನ್ನ ಸಂದಿಗ್ಧ ಪರಿಸ್ಥಿತಿಯನ್ನು ವಿವರಿಸಿದ.

ಅಷ್ಟು ಹೊತ್ತಿನ ಆಫೀಸಿನ ಮೇಜಿನ ಮೇಲಿದ್ದ ಕೆಂಪು ದೀಪ ಮಿಣುಕಲು ಶುರುವಾಯಿತು.. ಶರಲೇಖ ನನ್ನನ್ನು ಕುರಿತು 'ಓಹೋ ಯಾವುದೋ ಮುಖ್ಯ ವಿಷಯವನ್ನ ನನ್ನೊಡನೆ ಸಮಾಲೋಚಿಸಲು ನಮ್ಮ ಮುಖ್ಯಸ್ಥರು ಈಗಲೇ ಬರುತ್ತಾರೆ. ನೀನು ಇಲ್ಲಿರುವುದು ಅವರಿಗೆ ತಿಳಿಯಬಾರದು. ಇಲ್ಲೇ ಒಂದು ಕಿಚನೆಟ್ ಇದೆ. ಅವರು ಬಂದು ಹೋಗುವವರೆಗೂ ನೀನು ಅಲ್ಲಿ ಅಡಗಿ ಕುಳಿತಿರು' ಅಂತ ಹೇಳಿದ. ನಾನು 'ಇದ್ಯಾವ ಫಜೀತಿಯಪ್ಪಾ' ಎಂದುಕೊಂಡೇ ಕಿಚನೆಟ್‌ಗೆ ಹೋಗಿ ಅಡಗಿ ಕುಳಿತೆ.

ಐದು ನಿಮಿಷಗಳಾಗಿರಬಹುದು. ಯಾರೋ ಆಫೀಸಿನೊಳಗೆ ಬಂದ ಸದ್ದು. ಬಂತ ತಕ್ಷಣ ಮಾತುಕತೆ ಪ್ರಾರಂಭವಾಯಿತು. ಬಂದವರು ಹೊರಟನಂತರ, ಇದು ಅತಿ ಗೌಪ್ಯ ಮಾತುಕತೆ. ಈ ಬಗ್ಗೆ ಯಾರಿಗೂ ತಿಳಿಸಬಾರದೆಂದು ಶರಲೇಖ ನನ್ನಿಂದ ಭಾಷೆ ತೆಗೆದುಕೊಂಡಿದ್ದ. ನೀವೂ ಸಹಾ ಖಂಡಿತಾ ಯಾರಿಗೂ ಹೇಳಬೇಡಿ.

‘ಇನ್ನೊಂದು ಮುಖ್ಯ ಸಮಸ್ಯೆ ಉದ್ಭವವಾಗಿದೆ ಎಸ್.ಟು. ಏನು ಮಾಡುವುದು ಅಂತ ತೋಚ್ತಾನೇ ಇಲ್ಲ’

‘ಏನದು ಸಮಸ್ಯೆ ಎಸ್ ಒನ್? ವಿವರಿಸಿ ಹೇಳಿ. ನಾನು ನನ್ನ ಕೈಲಾದ ಸಲಹೆ ಕೊಡ್ತೇನೆ.’

‘ಸಂಕ್ಷಿಪ್ತವಾಗಿ ಹೇಳುವುದಾದರೆ ಇದು ಪ್ರತಿಮೆ ಸಮಸ್ಯೆ. ನಾಡಿನ ಮಹಾನುಭಾವರೊಬ್ಬರ ಪ್ರತಿಮೆಯ ಕೆಳಗೆ ನಮ್ಮ ಸುರಂಗವನ್ನು ತೋಡಬೇಕಾಗಿದೆ. ಪ್ರತಿಮೆಯನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸಲು ಇನ್ನೂ ಸರ್ಕಾರದ ಪರವಾನಗಿ ಸಿಕ್ಕಿಲ್ಲ. ಕೆಲಸ ಸ್ಥಗಿತವಾಗಿದೆ.’

‘ಇದೇನಿದು ನೀವು ಹೇಳುತ್ತಿರುವುದು ಎಸ್.ಒನ್. ಅಂತಹ ಪವಿತ್ರ ಸ್ಥಾನವನ್ನು ನಿಮ್ಮ ಸುರಂಗ ಯಂತ್ರದಿಂದ ಅಪವಿತ್ರಗೊಳಿಸುವುದು ಯಾವ ನ್ಯಾಯ? ಇದು ಖಂಡಿತ ತಪ್ಪು’

‘ಪ್ರತಿಮೆಯ ಕೆಳಗೆ ಸುರಂಗವನ್ನು ತೋಡದಿದ್ದರೆ ನಮ್ಮ ರೈಲು ಮಹಾತ್ಮ ಗಾಂಧಿ ರಸ್ತೆಯಿಂದ ಮಲ್ಲೇಶ್ವರದ ಸಂಪಿಗೆ ರಸ್ತೆಯನ್ನು ವಿಧಾನ ಸೌಧದ ಮೂಲಕ ಸೇರುವುದಾದರೂ ಹೇಗೆ, ತಿಳಿಸಿರಲ್ಲಾ?’

‘ಪವಿತ್ರ ಸ್ಥಳವನ್ನು ಬಳಸಿ ಹೋಗುವಂತೆ ಟ್ರಾಕ್ ಅಲೈನ್‌ಮೆಂಟನ್ನು ಬದಲಿಸಲು ಸಾಧ್ಯವೇ ಯೋಚಿಸಿ.’

‘ಅದು ತುಂಬಾ ಖರ್ಚಿನ ಕೆಲಸ ಹಾಗೂ ಅದನ್ನು ಕಾರ್ಯಗತ ಗೊಳಿಸಲು ಇನ್ನು ಏಳು ವರ್ಷಗಳಾದರೂ ಹಿಡಿಯುತ್ತದೆ ಎಂಬುದು ನಮ್ಮ ಅಂದಾಜು.’

‘ಆಗಲಿ ಬಿಡಿ. ಐದರ ಜೊತೆಗೆ ಏಳು. ಒಟ್ಟು ಒಂದು ರೌಂಡ್ ಫಿಗರ್ ಹನ್ನೆರಡಾಗುತ್ತೆ.’

‘ದಯವಿಟ್ಟು ತಮಾಷೆ ಮಾಡಬೇಡಿ ಎಸ್.ಟು. ನನಗೆ ಇನ್ನು ಐದು ವರ್ಷದಲ್ಲಿ ರಿಟೈರ್ ಆಗುತ್ತೆ. ಅಷ್ಟರಲ್ಲಿ ಈ ಹಂತವಾದರೂ ಮುಕ್ತಾಯವಾಗಬೇಕೆಂಬ ಆಶೆ. ಅಲ್ಲದೇ.............’

‘ಹೇಳಿ ಎಸ್.ಒನ್. ಅಲ್ಲದೇ............ ಏನು?’

‘ಅಲ್ಲದೇ ನೀವು ಇಲ್ಲಿಂದ ಬನಶಂಕರಿಗೆ ಹೋಗಬೇಕಾದರೂ ವಿಧಾನಸೌಧದ ಮೂಲಕ ಮೆಜೆಸ್ಟಿಕ್ ಜಂಕ್ಷನ್ ತಲುಪಿಯೇ ಹೋಗಬೇಕು. ಇಲ್ಲಿ ನಿಮ್ಮ ಬಿಡುಗಡೆಯ ವಿಷಯವೂ ಸೇರಿದೆ ಎಂಬುದನ್ನು ಮರೆಯ ಬೇಡಿ ಎಸ್.ಒನ್.’

‘ಹೌದಲ್ಲಾ ಒಂದು ಕೆಲಸ ಮಾಡಿ. ವಿಧಾನ ಸೌಧ ನಾರ್ತ್ ಮತ್ತು ವಿಧಾನ ಸೌಧ ಸೌತ್ ಅಂತ ಎರಡು ಸ್ಟೇಷನ್ ಮಾಡಿಬಿಡಿ. ಗುಡ್ಡದಂತೆ ಬಂದಿರುವ ಸಮಸ್ಯೆ ಮಂಜಿನಂತೆ ಕರಗಿ ಹೋಗುತ್ತೆ’

‘ಹಾಗಂದ್ರೆ?’

‘ಒಂದು ರೈಲುಗಾಡಿ ಬೈಯ್ಯಪ್ಪನ ಹಳ್ಳಿಯಿಂದ ಪ್ರತಿಮೆಯ ಉತ್ತರಕ್ಕೆ ಬಂದು ನಿಂತು ಅಲ್ಲಿಂದ ಹಿಂದಕ್ಕೆ ಹೋಗಲಿ. ಇನ್ನೊಂದು ಗಾಡಿ ಪ್ರತಿಮೆಯ ದಕ್ಷಿಣದಿಂದ ಮುಂದಕ್ಕೆ

ಪೀಣ್ಯದವರೆಗೆ ಓಡಾಡುತ್ತಿರಲಿ. ಆಗ ಪ್ರತಿಮೆಯ ಕೆಳಗೆ ಸುರಂಗ ತೋಡುವ ಅಗತ್ಯವೇ ಬರದು.'

ಅಷ್ಟೇ ನನಗೆ ಕೇಳಿಸಿದ್ದು. ತಲೆ ತಿರುಗಿದಂತಾಯಿತು. ಎಚ್ಚರವಾದಾಗ ನಾನು ಶರಲೇಖನ ಆಫೀಸಿನ ಸೋಫಾದ ಮೇಲೆ ಮಲಗಿದ್ದೆ. ಶರಲೇಖ ಹಣೆಗೆ ನೀರು ತಟ್ಟುತ್ತಿದ್ದ.

'ಬೇಗ ಇಲ್ಲಿಂದ ತಪ್ಪಿಸಿಕೊಂಡು ಬಂದು ಬಿಡು ಶರಲೇಖ. ಈ ಜನಗಳ ಜೊತೆ ಇದ್ದು ನಿನಗೂ ಅವರುಗಳಂತೆಯೇ ಯೋಚನೆ ಮಾಡುವ ಹಾಗೆ ಆಗ್ತಾ ಇದೆ. ಯಾವಾಗ ಬರ್ತೀಯಾ?' ಅಂತ ಕಳಕಳಿಯಿಂದ ಕೇಳಿದೆ.

'ಆತಂಕ ಬೇಡ ವತ್ಸನ, ಇಲ್ಲಿ ಇದೇ ನನ್ನ ಕೊನೆಯ ವಾರ. ಸಿಂಗಪುರದಲ್ಲಿ ನಡೆದಿರುವ ಒಂದು ಮುಖ್ಯ ಘಟನೆಗೆ ಅಲ್ಲಿನ ಪೋಲೀಸರು ನನ್ನ ಸಹಕಾರ ಕೋರಿದ್ದಾರೆ. ನಮ್ಮ ಸರ್ಕಾರವೂ ಅದಕ್ಕೆ ಒಪ್ಪಿಗೆ ನೀಡಿದೆ. ಇಬ್ಬರು ಬರುತ್ತೇವೆ ಅಂತ ಆಗಲೇ ಈಮೇಲ್ ಕಳಿಸಿದ್ದೇನೆ' ಅಂದ ಶರಲೇಖ.

✵

---

## ಭಿಕ್ಷೆ

ಅಮ್ಮಾ ತಾಯೀ ಅಂತ ಭಿಕ್ಷದವನು ಕೂಗಿದ. ಪರವಾಗಿಲ್ಲ ಇಂಥಾ ಐಟಿ ಬಿಟಿ ಕಾಲದಲ್ಲೂ ಭಿಕ್ಷುಕರು ಅಂದಿನ ಹಾಗೇ ಕೂಗ್ತಾರಲ್ಲ ಅಂತ ಹಿಂದಿನ ದಿನ ತಾನೇ ಅಮೆರಿಕಾದಿಂದ ಬಂದಿದ್ದ ಶಾಮ್ಲೀ (ಶಾಮಲಾ ಎನ್ನುವ ಹೆಸರು ಅಮೆರಿಕಾಕ್ಕೆ ಹೋದ ಮೇಲೆ ಬದಲಾದದ್ದು ಹೀಗೆ).

ಹೊರಬಂದು ಇನ್ನೂ ಅಡಿಗೆಯಾಗಿಲ್ಲಪ್ಪ ಅಂದಳು ಅಂದಿನ ಧಾಟಿಯಲ್ಲಿಯೇ.

ಭಿಕ್ಷುಕ ಪರವಾಗಿಲ್ಲ ತಾಯೀ ನಾನು ಭಿಕ್ಷಕ್ಕೆ ಬರಲಿಲ್ಲ ಒಂದರ್ಧ ಗಂಟೆ ನಿಮ್ಮನೆಯೊಳಗೆ ಕೂತಿರಬಹುದೇ ಅಂತ ಕೇಳಿದ. ಯಾಕೆ ಅಂತ ಕೇಳಿದರೆ ಟೀವಿಲಿ ಬೊಂಬಾಟ್ ಬೆಗ್ಗರ್ಸ್ ಸೀರಿಯಲ್ ಈಗ ಶುರುವಾಗುತ್ತೆ, ನಾನು ಇಲ್ಲಿಂದ ಮನೆಗೆ ಹೋಗೋ ಹೊತ್ತಿಗೆ ಲೇಟಾಗಿರುತ್ತೆ ಅದಿಕ್ಕೆ ಇಲ್ಲೇ ಕೂತ್ಕೊಂಡು ನೋಡ್ಕೊಂಡ್ ಹೋಗ್ತೀನಿ ಅಷ್ಟ್ರಲ್ಲಿ ಅಡಿಗೆಯಾದ್ರೆ ಭಿಕ್ಷೇನೂ ಹಾಕಿಬಿಡಿ ಅಂದ.

''ಉಂಡೂ ಹೋದ ಕೊಂಡೂ ಹೋದ'' ಅಂದ್ರೆ ಇದೇ ಅಲ್ವೆ ಅಂತ ಶಾಮ್ಲಿ ಬಾಗಿಲು ತೆಗೆದು, ನಿನ್ನನ್ನು ಒಳಗೆ ಸೇರಿಸೋಲ್ಲ ಬೇಕಾದ್ರೆ ಕಿಟಕಿಯಿಂದ್ಲೇ ನೋಡ್ಕೊಂಡು ಹೋಗು ಅಂದು ಒಳಗೆ ಹೋಗಿ ಬಾಗಿಲು ಹಾಕಿಕೊಂಡಳು.

– ಸುಕೇಶವ

# ಸರ್ ನೇಮ್, ಫಸ್ಟ್ ನೇಮ್, ಲಾಸ್ಟ್ ನೇಮ್.. ಇತ್ಯಾದಿ

**ನಾ**ನು ಹುಟ್ಟಿದಾಗ ನನಗೆ ನಾರಾಯಣನ್ ಎಂದು ನಾಮಕರಣ ಮಾಡಲಾಯಿತು.

ಪದ್ಧತಿಯಂತೆ ನನ್ನ ಅಪ್ಪನ, ಊರಿನ ಹೆಸರು ಎಲ್ಲಾ ಸೇರಿಸಿದಾಗ ನನ್ನ ಹೆಸರು 'ಟಿ.ಎಸ್. ನಾರಾಯಣನ್' ಎಂದು ಅಧಿಕೃತವಾಗಿ ಕಡತಗಳಲ್ಲಿ ದಾಖಲಾಯಿತು. ಆದರೆ ಮುಂದೊಂದು ದಿನ, ನಾನು ದೊಡ್ಡವನಾದ ಮೇಲೆ ಸರ್ ನೇಮ್, ಫಸ್ಟ್ ನೇಮ್, ಲಾಸ್ಟ್ ನೇಮ್ ವಿಷಯಗಳಲ್ಲಿ ನನ್ನ ಹೆಸರು ದೊಡ್ಡ ಗೊಂದಲವೇ ಆಗುತ್ತೆ ಎಂದು ಯಾರಿಗೂ ಆಗ ಹೊಳೆಯಲೇ ಇಲ್ಲ.

ಟಿ.ಎಸ್. ನಾರಾಯಣನ್ ಎಂದರೆ **ತ್ರಿವಂಡ್ರಂ** (ನಾನು ಹುಟ್ಟಿದ ಊರು) **ಸುಬ್ರಮಣಿಯ ಅಯ್ಯರ್** (ನಮ್ಮಪ್ಪನ ಹೆಸರು) ನಾರಾಯಣನ್ (ನನ್ನ ಹೆಸರು). ಇಲ್ಲಿ ನನ್ನ ಫಸ್ಟ್ ನೇಮ್ ಲಾಸ್ಟ್ ನೇಮ್ ಆಗಿದೆ ಎಂಬುದನ್ನು ಗಮನಿಸಿ. ಎಲ್ಲಾ ದಕ್ಷಿಣ ಭಾರತೀಯರ ಹೆಸರುಗಳದ್ದೂ ಇದೇ ಫಜೀತಿ.

ಆದರೆ ಶಾಲೆ ಕಾಲೇಜುಗಳಲ್ಲಿ ಈ ಹೆಸರಿನಿಂದ ತೊಂದರೆ ಏನೂ ಆಗಲಿಲ್ಲ. ಫಸ್ಟ್ ನೇಮ್ ಲಾಸ್ಟ್ ನೇಮ್ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಲೇ ಇಲ್ಲ. ಏಕೆಂದರೆ ಎಲ್ಲರದ್ದೂ ಇದೇ ಕತೆ ಆಗಿತ್ತು.

ಆದರೆ ಪಾಸ್‌ಪೋರ್ಟ್ ಎಂಬ ಅಮೂಲ್ಯ ದಾಖಲೆಗಾಗಿ ನಾನು ಅರ್ಜಿ ಸಲ್ಲಿಸಲು ಹೊರಟಾಗ ಸಮಸ್ಯೆ ಎದುರಾಯಿತು. ಏಕೆಂದರೆ ಅಲ್ಲಿ ಫ್ಯಾಮಿಲಿ ನೇಮ್, ಗಿವನ್ ನೇಮ್ ಎಂಬ ಕಾಲಂಗಳಿದ್ದು ಅಲ್ಲಿ ನಾನು ನನ್ನ ಇನಿಷಿಯಲ್‌ಗಳನ್ನು ಪೂರ್ಣವಾಗಿ ಬರೆಯಬೇಕಾಗಿತ್ತು.

ಈಗ ನನ್ನ ಬಳಿ ಹಳೆಯ ಮತ್ತು ಹೊಸ ಪಾಸ್‌ಪೋರ್ಟ್‌ಗಳಿವೆ. ಅದರಲ್ಲಿ ವಿವರಗಳು ಹೀಗಿವೆ:

1 ಗಿವನ್ ನೇಮ್ : ತ್ರಿವಂಡ್ರಂ ಸುಬ್ರಮಣಿಯ ಅಯ್ಯರ್ ನಾರಾಯಣನ್

ಫ್ಯಾಮಿಲಿ ನೇಮ್ ಖಾಲಿ ಇದೆ

2 ಫ್ಯಾಮಿಲಿ ನೇಮ್ : ತ್ರಿವಂಡ್ರಂ ಸುಬ್ರಮಣಿಯ ಅಯ್ಯ್ಯರ್

ಗಿವನ್ ನೇಮ್ : ನಾರಾಯಣನ್

3 ಫ್ಯಾಮಿಲಿ ನೇಮ್ : ತ್ರಿವಂಡ್ರಂ

ಗಿವನ್ ನೇಮ್ : ನಾರಾಯಣನ್ ಸುಬ್ರಮಣಿಯ ಅಯ್ಯರ್

ಹೀಗೆ ವಿವರಗಳುಳ್ಳ ಪಾಸ್‌ಪೋರ್ಟ್ ವಿದೇಶಕ್ಕೆ ಹೊರಟಾಗ ವಿಚಿತ್ರ ಸಮಸ್ಯೆಗಳು ಎದುರಾಗತೊಡಗಿದವು.

ವಿಮಾನ ನಿಲ್ದಾಣದಲ್ಲಿ :

ಇಮಿಗ್ರೇಷನ್ ಅಧಿಕಾರಿ : ನಿಮ್ಮ ಟಿಕೆಟ್‌ನಲ್ಲಿ ನಿಮ್ಮ ಹೆಸರು ನಾರಾಯಣನ್ ಟಿ.ಎಸ್. ಎಂದಿದೆ. ಆದರೆ ಪಾಸ್‌ಪೋರ್ಟ್‌ನಲ್ಲಿ ಉದ್ದನೆಯ ಹೆಸರಿದೆ. ನೀವಿಬ್ಬರೂ ಒಂದೇ ಏನು?

ಹೋಟೆಲಿನಲ್ಲಿ : ನಿಮ್ಮ ಹೆಸರು? (ಅವರಿಗೆ ಸಾಮಾನ್ಯವಾಗಿ ಗಿರಾಕಿಯ ಲಾಸ್ಟ್ ನೇಮ್ ಬೇಕು)

ನಾನು 'ನಾರಾಯಣನ್' ಎಂದು ಹೇಳಿದಾಗ ಗೊಂದಲ ಶುರು

ಹೋಟೇಲ್ : ನಿಮ್ಮ ಫಸ್ಟ್ ನೇಮ್?

ನಾನು : ನಾರಾಯಣನ್

ಹೋಟೇಲ್ : ಓ! ನಿಮ್ಮ ಲಾಸ್ಟ್ ನೇಮ್?

ನಾನು: ಟಿ.ಎಸ್.

ಹೋಟೇಲ್ : ಆದರೆ ಟಿ.ಎಸ್. ಎಂಬುದು ಇನಿಷಿಯಲ್ಸ್, ಹೆಸರಲ್ಲ.

ನಾನು (ತುಸು ಯೋಚಿಸಿ, ಸರಳವಾಗಿದ್ದರೆ ಗೊಂದಲ ಇರದು ಎಂಬ ಭಾವನೆಯಿಂದ): ಅಯ್ಯರ್

ಹೋಟೇಲ್ : ಆದರೆ ಆಗಲೆ ಟಿ.ಎಸ್. ಎಂದು ಹೇಳಿದಿರಿ ಈಗ ಅಯ್ಯರ್ ಎನ್ನುತ್ತಿದ್ದೀರಿ

ನಾನು : ಅಯ್ಯೋ ಅದೊಂದು ದೊಡ್ಡ ಕತೆ. ನನ್ನ ಫಸ್ಟ್ ನೇಮ್ ನಾರಾಯಣನ್, ನನ್ನ ಲಾಸ್ಟ್ ನೇಮ್ ತ್ರಿವಂಡ್ರಂ.

ಅದು ಹೇಗೋ ಹೋಟೇಲಿನ ಪಾಟಿಸವಾಲಿನಿಂದ ಬಚಾವಾದೆ ಎಂದುಕೊಳ್ಳಿ. ಹೊರಗಡೆ ಇನ್ನೊಂದು ಬಗೆಯ ಕಿರುಕುಳ.

ಮೇಧಾವಿ 1 : ನೀವು ತ್ರಿವಂಡ್ರಂನವರು.. ಅಂದರೆ ಮಲ್ಲು?

ನಾನು : ಇಲ್ಲ ನಾನೊಬ್ಬ ತಮಿಳಿಯನ್.. ಹುಟ್ಟಿದ್ದು ಕೇರಳದಲ್ಲಿ.

ಮೇಧಾವಿ 2 : ತ್ರಿವಂಡ್ರಂ ತಿರುವನಂತಪುರಂ ಆದಮೇಲೆ ನೀವು ನಿಮ್ಮ ಹೆಸರು ಬದಲಾಯಿಸಿಕೊಳ್ಳಲಿಲ್ಲವೆ?

ಮೇಧಾವಿ 3 : ನಿಮ್ಮ ಹೆಸರು ನಾರಾಯಣನ್ ತ್ರಿವಂಡ್ರಂ ಆಗಿದ್ದರೆ ನನ್ನ ಹೆಸರು ಜಾನ್ ಚಿಕಾಗೊ!

ಆರು ವರ್ಷಗಳಿಂದ ವಿದೇಶದಲ್ಲಿರುವುದರಿಂದ ನನಗೀಗ ಮನದಟ್ಟಾಗಿದೆ : ಒಂದು ಫಸ್ಟ್ ನೇಮ್ ಮತ್ತು ಒಂದು ಲಾಸ್ಟ್ ನೇಮ್ ಇರಲೇಬೇಕು. ಇನಿಷಿಯಲ್ಸ್ ಬೇಡ.

ಆದುದರಿಂದ ನಾನು ಈಗ ನಾರಾಯಣನ್ ತ್ರಿವಂಡ್ರಂ.

ಈ ಹೆಸರಿಗೆ ಕಾಗದ, ವಿದ್ಯುತ್ ಬಿಲ್, ಟೆಲಿಫೋನ್ ಬಿಲ್ ಎಲ್ಲವೂ ಬರುತ್ತವೆ. ನನ್ನ ಟ್ರಾವೆಲ್ ಏಜೆಂಟ್ ನನ್ನ ಟಿಕೆಟ್ ಅನ್ನು ನಾರಾಯಣನ್ ತ್ರಿವಂಡ್ರಂ ಎಂಬ ಹೆಸರಿನಲ್ಲಿ ಕೊಳ್ಳುತ್ತಾನೆ. ಆದರೆ ಭಾರತದಲ್ಲಿ ನಾನು ಟಿ.ಎಸ್. ನಾರಾಯಣನ್ ಆಗಿಯೇ ಉಳಿದಿದ್ದೇನೆ.

ವಿದೇಶದಿಂದ ಬರುವಾಗ ಏರ್‌ಪೋರ್ಟ್‌ನಲ್ಲಿ ನಾನು ತಡಮಾಡಿದರೆ "ಅಟೆನ್ಷನ್ ಮಿ. ತ್ರಿವಂಡ್ರಂ, ಪ್ಲೀಸ್ ಬೋರ್ಡ್ ಯುವರ್ ಫ್ಲೈಟ್ ಟು ಬೆಂಗಳೂರು ಬಿಎ 119" ಎಂಬ ಪ್ರಕಟಣೆ ಬಂದಾಗ ಯಾರೀತ ಮಿ. ತ್ರಿವಂಡ್ರಂ ಎಂದು ನೂರಾರು ಭಾರತೀಯರು ಚಕಿತರಾಗಿ ನನ್ನ ಕಡೆ ನೋಡುತ್ತಿರುತ್ತಾರೆ.

**(ಇಂಟರ್‌ನೆಟ್‌ನಲ್ಲಿ ಕಂಡ ಈ ಲೇಖನವನ್ನು ಅಪರಂಜಿಗೆ ಕಳಿಸಿದವರು : ಪಲವಸ್ತೂರು ದೊರೆಸ್ವಾಮಿ ಗೋಪಾಲ್ ಅಥವಾ ಪಿ.ಡಿ. ಗೋಪಾಲ್)**

---

## ಹೊಡೆತ

ಹೆಂಡ್ತಿನ ಹೊಡೆದ ಅಂತ ಸೋಮುನ ಪೋಲೀಸಿನವರು ಎಳೆದುಕೊಂಡು ಹೋದರು.

ಸರ್, ನನ್ನ ಹೆಂಡ್ತೀನ ನಾನು ಹೊಡೀತೀನಿ ನಿಮಗೇನ್ಸಾರ್, ನಮ್ಮಾವ ಅವಳನ್ನು ನನಗೆ ಮದುವೆ ಮಾಡಿಕೊಟ್ಟಾಗ ಅವಳನ್ನು ಹೊಡಿ-ಬಡಿ ಏನು ಬೇಕಾದರೂ ಮಾಡು ಆದ್ರೆ ಅವಳಿಗೆ ಡೈವೋರ್ಸ್ ಮಾತ್ರ ಕೊಡಬೇಡ ಅಂದಿದಾರೆ ಅಂತ ರೋಫ್ ಹಾಕಿದ.

ಇನ್ಸ್‌ಪೆಕ್ಟರು ಪೇದೆಗಳನ್ನು ಕರೆದು ಏನ್ರೀ ಅವನು ಏನಾದ್ರೂ ಬಾಯಿ ಬಿಟ್ನಾ ಅಂತ ಪದೇ ಪದೇ ಕೇಳ್ತಿದ್ರು. ಪೇದೆಗಳು ನಾವು ಎಷ್ಟು ಕೇಳಿದರೂ ಅವನು ಬಾಯಿ ಬಿಡ್ತಿಲ್ಲ ನೀವೇ ಕೇಳಿ ಅಂದು ಸೋಮುನ ಎಳ್ಕೊಂಡು ಬಂದು ಇನ್ಸ್‌ಪೆಕ್ಟರ್ ಮುಂದೆ ನಿಲ್ಲಿಸಿದರು.

ಇನ್ಸ್‌ಪೆಕ್ಟರು ಸೋಮುನ ನೋಡಿ ಹೆದರಿಸುತ್ತಾ, ನಿಜ ಬೊಗಳದೆಯೋ ಸರಿ ಇಲ್ಲದಿದ್ದರೆ ನಿನ್ನನ್ನ ಲಾಕಪ್‌ನಲ್ಲಿ ಹಾಕಿ ಒದ್ದು ಹಣ್‌ಗಾಯಿ ನೀರ್‌ಗಾಯಿ ಮಾಡ್ತೀನಿ ಅಂದು, ಸೋಮು ಹತ್ತಿರ ಬಂದು ಮೆತ್ತಗೆ ಕೇಳಿದರು ನೋಡು ನಾನಲ್ಲದೇ ಈ ಸ್ಟೇಷನ್ನಿನಲ್ಲಿ ಇರೋ ಎಲ್ಲರಿಗೂ ಈ ಪ್ರಶ್ನೆಗೆ ಉತ್ತರ ಬೇಕಾಗಿದೆ. ಹೇಳು ಹೆಂಡ್ತಿಗೆ ಹೊಡೆಯೋ ಧೈರ್ಯ ನಿನಗೆ ಹೇಗೆ ಬಂತು. ಹಾಗೆ ಧೈರ್ಯ ಬರಬೇಕಾದರೆ ಏನು ಮಾಡಬೇಕು ಅಂದಾಗ ಸೋಮು ಸುಸ್ತು.

- **ಸುಕೇಶವ**

# ಸಹವಾಸ ದೋಷ

**- ಗಣೇಶ ಹೆಗ್ಗಡೆ**

**ಇಂ**ಟೆಲಿಜೆನ್ಸ್ ಎಸ್.ಪಿ. ಎಂಗತಂಬಿ, ಡಿ.ಜಿ.ಪಿ. (ಪ್ರಿಸನ್ಸ್) ತೋಲಾಂಡರಾಯರ ಮುಂದೆ ಗೌರವದಿಂದ ಸೆಲ್ಯೂಟ್ ಹೊಡೆದು ನಿಂತರು.

''ಪ್ಲೀಸ್ ಬಿ ಸೀಟೆಡ್'' ಎಂದು ಕೈ ತೋರಿದರು ಡಿ.ಜಿ.ಪಿ.

''ನಮ್ಮ ಏರಿಯಾದಲ್ಲಿ ವ್ಯವಸ್ಥೆ ಮಾಮೂಲಾಗಿದೆ ತಾನೇ? ಹೊಸ ಸುದ್ದಿ ಏನಾದರೂ ಇದೆಯಾ?''

''ಸರ್, ರಾಜ್ಯದ ಸಣ್ಣ ಪುಟ್ಟ ಬಂದೀಖಾನೆಗಳಲ್ಲಿ ಸಮಸ್ಯೆ ಏನೂ ಆಗಿಲ್ಲ. ಆದರೆ ಸೂರಪ್ಪನ ಅಗ್ರಹಾರದ ಲೋಕಲ್ ಬಂದೀಖಾನೆಯಲ್ಲಿ ಪರಿಸ್ಥಿತಿ ಗಂಭೀರವಾಗಿದೆ.''

''ವಾಟ್?''

> ''ನಿಲ್ಲಿಸಿ.. ನಿಲ್ಲಿಸಿ.. ಇದು ಬಳ್ಳಾರಿ ಗೀತೆ! ರಾಷ್ಟ್ರಗೀತೆಯಲ್ಲ..... ಎಂದವರು ಕೂಗಿಕೊಂಡಿದ್ದೇಕೆ?''

''ಸರ್, ರೌಡಿಶೀಟರ್‌ಗಳ ಸೆಲ್‌ಗಳಲ್ಲಿ ನಮಗೆ ಆತಂಕವಿಲ್ಲ. ಆದರೆ ವಿ.ಐ.ಪಿ. ಸೆಲ್‌ಗಳು ಈಗಾಗಲೆ ಭರ್ತಿಯಾಗಿ ಈಗ ಒಂದೇ ಒಂದು ಸೆಲ್ ಮಾತ್ರ ಖಾಲಿ ಇದೆ. ಲೋಕಾಯುಕ್ತ ಕೋರ್ಟಿನಲ್ಲಿ ಇನ್ನೂ ಹತ್ತು ಎಫ್.ಐ.ಆರ್.ಗಳು ವಿಚಾರಣಾ ಹಂತದಲ್ಲಿದೆ. ಜೈಲು ಸೂಪರಿಂಡೆಂಟ್‌ಗೆ ಭಯ ಶುರುವಾಗಿದೆ.''

''ಡೋಂಟ್ ವರಿ. ಅಷ್ಟರೊಳಗೆ ಯಾರಿಗಾದ್ರು ಜಾಮೀನು ವ್ಯವಸ್ಥೆಯಾಗಬಹುದು ಅಥವಾ ವಿಕ್ಟೋರಿಯಾ ಆಸ್ಪತ್ರೆಯ ಜೈಲ್ ವಾರ್ಡ್‌ಗೆ ಯಾರಾದ್ರು ಶಿಫ್ಟ್ ಆಗ್ಬಹುದು.''

''ಸರ್, ಇನ್ನೊಂದು ಸಮಸ್ಯೆ ಎದುರಾಗಿದೆ. ಮಾಜಿ ಮುಖ್ಯಮಂತ್ರಿ ವಿಷಕಂಠಯ್ಯನವರು ದಾಖಲಾದಾಗಿನಿಂದ, ಅವರನ್ನು ಭೇಟಿ ಮಾಡಲು ಮಂತ್ರಿಗಳ ಹಿಂಡೇ ದೌಡಾಯಿಸುತ್ತಿದೆ. ಜತೆಗೆ ಸಾಲದು ಅಂತ ಮಠಾಧೀಶರು ಹಾಗೂ ಅವರ ಪಟಾಲಂಗಳ ಕಾಟ ಬೇರೆ. ಕಂಟ್ರೋಲ್ ಮಾಡುವುದಕ್ಕೇ ಆಗುತ್ತಿಲ್ಲ.''

''ಮಿಸ್ಟರ್ ಎಂಗತಂಬಿ, ಈ ವಿಚಾರಗಳೆಲ್ಲಾ ನ್ಯಾಚುರಲ್. ಹಾಗೇ ಗಂಭೀರವಾಗಿ ಯೋಚಿಸಿ. ಈ ಭೇಟಿಗಳೆಲ್ಲಾ ಮೇಲ್ನೋಟಕ್ಕೆ ಗೋಚರಿಸುವ ಹಾಗೆ ಅನುಕಂಪದ ಭೇಟಿಗಳಲ್ಲ.''

''ಮತ್ತೆ?''

''ಭೇಟಿ ಮಾಡುತ್ತಿರುವವರ ಹಿನ್ನೆಲೆ ಊಹಿಸಿ. ಒಂದರ್ಥದಲ್ಲಿ ಅವರುಗಳೂ 'ಒಳಗಿರುವವರ ' ಹಿಂಬಾಲಕರೆ. ಬಂದೀಖಾನೆಯಲ್ಲಿ ಏನೇನು ವ್ಯವಸ್ಥೆಗಳಿವೆ? ಊಟ-ತಿಂಡಿ ವ್ಯವಸ್ಥೆ ಹ್ಯಾಗಿದೆ? ಮನರಂಜನೆ ಏನಿದೆ? ಇತ್ಯಾದಿ ಸೂಕ್ಷ್ಮ ವಿಚಾರಗಳನ್ನು ತಿಳಿದುಕೊಳ್ಳುವ ಕುತೂಹಲ. ಈ ಭೇಟಿಗಳ ಮೂಲ ಉದ್ದೇಶ.''

''ಗೊತ್ತಾಯಿತು ಸರ್. ಆದರೆ ಕೋರ್ಟ್ ನಮ್ಮನ್ನು ತರಾಟೆಗೆ ತಗೊಂಡ್ರೆ ಕಷ್ಟ''

''ನೊ. ಮಿ. ಎಂಗತಂಬಿ, ನ್ಯಾಯಾಧೀಶರುಗಳೂ ಮುಂದಾಲೋಚನೆಯುಳ್ಳವರು. ಯಾಕೆಂದರೆ ಭವಿಷ್ಯದ ಆರೋಪಿಗಳು ಹೀಗೆ ತಯಾರಿ ಮಾಡಿಕೊಂಡಿರುವುದರಿಂದ ಜಾಮೀನು ವಿಚಾರಗಳಲ್ಲಿ ತೀರ್ಪು ಕೇಳಿದ ನಂತರ ಕೋರ್ಟ್ ಆವರಣದಲ್ಲಿ ಕುಸಿದು ಬೀಳುವ ಪ್ರಸಂಗಗಳು ಇನ್ಮುಂದೆ ಕಡಿಮೆಯಾಗಬಹುದೆಂಬ ಅಭಿಪ್ರಾಯ ನ್ಯಾಯಾಲಯದ್ದು.''

''ಸರ್ ಇನ್ನೊಂದು ವಿಷಯ. ಮಾಜಿ ಮಂತ್ರಿ ಕಿಟ್ಟಯ್ಯನವರು ಸೆಲ್‌ಗೆ ದಾಖಲಾದಾಗಿನಿಂದ ಇಡೀ ಜೈಲಿನ ವಾತಾವರಣವೇ ಬದಲಾಗಿ ಹೋಗಿದೆ. ಕೆಲವು ಸೆಲ್‌ಗಳಲ್ಲಿ 'ಏಳು ಕೊಂಡಲವಾಡ' ಭಜನೆ ಕಾರ್ಯಕ್ರಮಗಳು ಆರಂಭವಾಗಿದೆ. ಪ್ರತಿ ಭಾನುವಾರ ಬಂದೀಖಾನೆಗೆ, ತಿರುಪತಿಯಿಂದ ಐದು ಸಾವಿರ ಕಿಂಗ್ ಸೈಜ್ ಲಾಡುಗಳ ವ್ಯವಸ್ಥೆಯಾಗಿದೆ. ಮೀಡಿಯಾದವರ ಕಣ್ಣು ತಪ್ಪಿಸಲು ಜೈಲು ಸೂಪರಿಂಡೆಂಟರು ಹರಸಾಹಸ ಮಾಡುತ್ತಿದ್ದಾರೆ.''

''ಇನ್ನೇನಾದರೂ ವಿಷಯ?''

''ಸರ್, ಮೊನ್ನೆ ಒಂದು ಉಭಯ ಸಂಕಟ ಎದುರಾಗಿತ್ತು. ಅಂದು ಮಾ॥ಮು॥ಮ॥ ವಿಷಕಂಠಯ್ಯನವರ ಬಿಡುಗಡೆ. ಎಲ್ಲಾ ಏರ್ಪಾಟುಗಳನ್ನೂ ಮಾಡಿಕೊಳ್ಳಲಾಗಿತ್ತು. ಜೈಲಿನ ಮುಖ್ಯದ್ವಾರ ದಾಟುವ ಮೊದಲೇ ಆರತಿ ವ್ಯವಸ್ಥೆಯಾಗಬೇಕೆಂಬ ಅನುಯಾಯಿಗಳ ಬೇಡಿಕೆ ಪೀಕಲಾಟ ತಂದಿತ್ತು. ಜೈಲ್ ಮ್ಯಾನ್ಯುಯಲ್ ಪ್ರಕಾರ ಒಳಗಡೆ ನಾವು ಏನೂ ಮಾಡುವಂತಿಲ್ಲ. ಜತೆಗೆ ನಮ್ಮ ಬಂದೀಖಾನೆಯಲ್ಲಿ ಆರತಿ ತಟ್ಟೆಗಳೇ ಇಲ್ಲ. ಆಗಲೇ ಮಾ॥ಮ॥ ಕಿಟ್ಟಯ್ಯನವರು ನಮ್ಮ ಸಹಾಯಕ್ಕೆ ಬಂದಿದ್ದು.''

''ಅವರೇನು ಮಾಡಿದ್ರು?''

''ಸರ್, ಸ್ವಾಮಿ ಭಕ್ತರಾದ ಅವರು ತಮ್ಮ ಅಂಗೈಯಲ್ಲೇ ಕರ್ಪೂರ ಹಚ್ಚಿಕೊಂಡು ಅಭಿಮಾನದಿಂದ ಆರತಿ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.''

''ಹೌದೆ? ಅವರು ಕೈ ಸುಟ್ಟುಕೊಳ್ಳಲಿಲ್ಲವೇ?''

''ಎಂಥೆಂಥ ವ್ಯವಹಾರಗಳಲ್ಲಿ ಕೈ ಸುಟ್ಟುಕೊಂಡಿದ್ದೇನೆ, ಇದ್ಯಾವ ಲೆಕ್ಕ? ಎಂಬ ಅವರ ವಿವರಣೆ ಕೇಳಿ ಪ್ರೆಸ್‌ನವರೂ ದಂಗಾಗಿ ಹೋದರು.''

''ಸರ್, ಕೊನೆಯದೊಂದು ಬಿನ್ನಹ.''

''ಹೇಳಿ...''

''ಬಂದೀಖಾನೆಯ ಖೈದಿಗಳು ಕನ್ನಡ ರಾಜ್ಯೋತ್ಸವದ ಪ್ರಯುಕ್ತ 'ಸತ್ಯಹರಿಶ್ಚಂದ್ರ' ಎಂಬ ನಾಟಕ ಹಮ್ಮಿಕೊಂಡಿದ್ದಾರೆ. 'ಶನಿ ಪ್ರಭಾವ' ನಾಟಕ ಮಾಡಲು ವಿ.ಐ.ಪಿ. ಸೆಲ್‌ನ ಪ್ರಮುಖರು ತುಂಬಾ ಒತ್ತಡ ತಂದಿದ್ದರು. ಸತ್ಯಕ್ಕಾಗಿ ರಾಜಾ ಹರಿಶ್ಚಂದ್ರ ತನ್ನ ಹೆಂಡತಿಯನ್ನೇ

ಮಾರಿಕೊಂಡ. ಆದರೆ ಸರ್ಕಾರಿ ಜಮೀನುಗಳನ್ನು ಮಾರಿ ಈ ದುಃಸ್ಥಿತಿಗೆ ಬಂದರೂ ಹೆಂಡತಿಯನ್ನು ನೀವು ಉಳಿಸಿಕೊಂಡಿರಿ ಎಂಬ ಜೈಲು ಸೂಪರಿಂಡೆಂಟರ ಉತ್ತರದಿಂದ ಆ ಪ್ರಮುಖರೆಲ್ಲಾ ಒಪ್ಪಿಕೊಂಡರು.''

★ ★ ★

ಅಂದು ಕನ್ನಡ ರಾಜ್ಯೋತ್ಸವ. ಬಂದೀಖಾನೆಯ ಆವರಣದಲ್ಲಿ ಸಂಭ್ರಮದ ವಾತಾವರಣ. ಕನ್ನಡದ 'ಕಟ್ಟಾಳು'ಗಳ ಪ್ರಾಯೋಜತ್ವದಲ್ಲಿ ''ಸತ್ಯಹರಿಶ್ಚಂದ್ರ'' ನಾಟಕ ಬಲು ಅದ್ದೂರಿಯಾಗಿ ಮೂಡಿ ಬಂತು. ಡಿ.ಜಿ.ಪಿ. ತೋಲಾಂಡರಾಯರ ವದನದಲ್ಲಿ ಸಂತೃಪ್ತಿಯ ಭಾವ. ಆದರೆ ಕೊನೆಯ ಹಂತದ ಆ ಘಟನೆ ನಡೆಯದಿದ್ದರೆ.......

ವಾಡಿಕೆಯಂತೆ ಕಾರ್ಯಕ್ರಮದ ಕೊನೆಯಲ್ಲಿ ಈಗ 'ರಾಷ್ಟ್ರಗೀತೆ' ಎಂಬ ಪ್ರಕಟಣೆ ಕೇಳಿಬಂತು. ರಾಷ್ಟ್ರಗೀತೆ ಒಕ್ಕೊರಲಿನಿಂದ ಆರಂಭವಾಯಿತು ''.... ಜನ .... ಗಣಿ .... ಮನಿ .... ಅಧಿ ನಾಯಕ .... ಜಯ ....''

''ನಿಲ್ಲಿಸಿ.. ನಿಲ್ಲಿಸಿ.. ಇದು ಬಳ್ಳಾರಿ ಗೀತೆ! ರಾಷ್ಟ್ರಗೀತೆಯಲ್ಲ......''

ಡಿ.ಜಿ.ಪಿ.ಯವರ ಗುಡುಗಿಗೆ ಇಡೀ ಜೈಲಿನ ಸಿಬ್ಬಂದಿಯೇ ಥರ ... ಥರ ಗುಟ್ಟಿತು.

''ತಪ್ಪು ನಮ್ಮದಲ್ಲ. ಹಾಳು ಸಹವಾಸ ದೋಷದಿಂದ ಈ ಪ್ರಮಾದ ನಡೆದುಹೋಯಿತು'' ಎಂಬ ತೊದಲುನುಡಿ ಜೈಲು ಸೂಪರಿಂಡೆಂಟರ ಗಂಟಲಿನಲ್ಲಿಯೇ ಉಳಿದು ಹೋಯಿತು.

✵

## ಉದಾರ ದೇಣಿಗೆ

ಒಂದು ದೊಡ್ಡ ಹೈವೆ.

ಟ್ರಾಫಿಕ್ ಜಾಮ್ ಆಗಿದೆ. ಅರ್ಧಗಂಟೆ ಆದರೂ ಒಂದು ವಾಹನ ಕದಲಿಲ್ಲ.

ಆಗ ಒಂದು ನಿಂತಿದ್ದ ಕಾರಿನ ಕಿಟಕಿಯ ಬಾಗಿಲು ತಟ್ಟಿದರು ಯಾರೋ. ಡ್ರೈವರ್ ಗಾಜು ಸರಿಸಿ ಕೇಳಿದರು: ಏನಾಗಿದೆ?

ಕೆಲವು ಎಂ.ಎಲ್.ಏ.ಗಳನ್ನ ಡಕಾಯಿತರು ಹಿಡಿದಿದ್ದಾರೆ. 25 ಲಕ್ಷ ರೂ. ಕೊಟ್ಟರೆ ಬಿಡ್ತಾರಂತೆ. ಇಲ್ಲದಿದ್ರೆ ಪೆಟ್ರೋಲ್ ಹಾಕಿ ಸುಡ್ತಾರಂತೆ. ಅದಕ್ಕೆ ಕೆಲವರು ಕಲೆಕ್ಷನ್ ಹೊರಟಿದ್ದಾರೆ.

ಎಲ್ಲರೂ ಎಷ್ಟೆಷ್ಟು ಕೊಡ್ತಾ ಇದ್ದಾರೆ?

ತಲಾ ಒಂದೊಂದು ಲೀಟರ್ - **ಧೃತರಾಷ್ಟ್ರ**

**SIEMENS**

Authorised
Hearing Care
Centre

**Do you need the best sound technology?**

**Serving you with quality & trust for more than a decade.**




**Whisper Hearing Aids**
Pvt. Ltd.

ವಿಸ್ಪರ್

1030/13, 25 main, 39 cross, 4th ‘T’ block,
**Jayanagara**, Bengaluru - 560041

**ph:** 080-26640571, 9741765454
www.hearingaidindia.in

**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಬದುಕಿದೆಯಾ ಬಡಜೀವವೇ

**- ಡಾ|| ಡಿ.ವಿ. ಗುರುಪ್ರಸಾದ್**

**ನ**ನಗೆ ಬುದ್ಧಿಬಂದಾಗಿನಿಂದಾಗ ನಾನು ಆಸ್ಪತ್ರೆಗೆ ದಾಖಲಾಗಿರಲಿಲ್ಲ. ಆದರೆ ವಾಹನ ಅಪಘಾತ ಒಂದರಲ್ಲಿ ಜಖಂಗೊಂಡದ್ದರಿಂದ ಆಸ್ಪತ್ರೆಗೆ ಸೇರಲೇಬೇಕಾದ ಅನಿವಾರ್ಯತೆ ನನಗುಂಟಾಯಿತು. ನನ್ನ ಸುಕೃತವೋ ಇಲ್ಲ ದುಕೃತವೋ ನನ್ನ ಜೊತೆ ನನ್ನ ಶ್ರೀಮತಿಯೂ ವಾಹನ ಅಪಘಾತದಲ್ಲಿ ಮೂಳೆಗಳನ್ನು ಮುರಿದುಕೊಂಡಿದ್ದಳು. ಹೀಗೆ ಇಬ್ಬರೂ ಜೊತೆಯಾಗಿ ಆಸ್ಪತ್ರೆಯ ಡಬಲ್ ರೂಮ್‌ನಲ್ಲಿ ವಿರಮಿಸುವ ಸಂದರ್ಭ ಒದಗಿತ್ತು.

ನನ್ನ ಪೃಷ್ಟ ಭಾಗದಲ್ಲಿ ಫ್ರ್ಯಾಕ್ಚರ್ ಆಗಿದ್ದರಿಂದ ನಾನು ಹಾಸಿಗೆ ಬಿಟ್ಟು ಏಳಲೇಬಾರದು ಎಂಬ ಕಟ್ಟಪ್ಪಣೆ ವಿಧಿಸಿದ್ದರು. ಇದಲ್ಲದೆ ನಾನು ಕಾಲನ್ನು ಆಚೆಈಚೆ ಅಲ್ಲಾಡಿಸದಂತೆ ಕಾಲಿಗೆ ಪಟ್ಟಿ ಕಟ್ಟಿ ಚೈನ್ ಬಿಗಿದು ಮರಳು ಮೂಟೆ ತೂಗಿಸಿದ್ದರು. ಎಲ್ಲೂ ಅಲ್ಲಾಡದೆಯೇ ಮೇಲಿನ ಸೂರನ್ನು ನೋಡುತ್ತಾ ಮಲಗಿದ್ದೆ.

ಪತಿಪತ್ನಿಯರಿಬ್ಬರೂ ವಾಹನ ಅಪಘಾತದಲ್ಲಿ ಗಾಯಗೊಂಡಿದ್ದಾರೆ, ಇಬ್ಬರಿಗೂ ಸಾದಾ ಗಾಯಗಳು ಆಗಿವೆ. ಗಾಭರಿ ಇಲ್ಲ ಎಂದು ಟಿವಿ ವಾಹಿನಿಯೊಂದು ಆಗಲೇ ಬಿತ್ತರಿಸಿತ್ತು. ಅದನ್ನು ಅನುಸರಿಸಿ ಹಲವಾರು ಪತ್ರಿಕೆಗಳು ನಮಗೆ ಅಪಘಾತವಾದ ಬಗ್ಗೆ ವರದಿಗಳನ್ನು ಪ್ರಕಟಿಸಿದ್ದವು. ಈ ವರದಿಗಳು ಬಂದಿದ್ದೇ ತಡ ಟೆಲಿಫೋನ್ ಕರೆಗಳು ಬರುವುದು ನಿಲ್ಲಲೇ ಇಲ್ಲ. ಸಧ್ಯ ನಮಗೇನು ಆಗಿಲ್ಲವೆಂದೂ ದೇವರು ದೊಡ್ಡವನೆಂದೂ ಹಲವರು ಹೇಳಿದರೆ, ಟಿವಿಯಲ್ಲಿ ನಿಮಗೆ ಸಾದಾ ಗಾಯ ಎಂದು ಹೇಳಿದರು, ನೀವು ಆಸ್ಪತ್ರೆಗೆ ಏಕೆ ಸೇರಿಕೊಂಡಿರಿ, ಮೆಡಿಕಲ್ ಇನ್ಸುರೆನ್ಸ್ ಕ್ಲೈಮ್ ಮಾಡಲು ಆಸ್ಪತ್ರೆಗೆ ದಾಖಲಾಗಿದ್ದೀರಾ ಎಂದು ಕೆಲವರು ಕೇಳಿದರು. ಇನ್ನೂ ಕೆಲವರು ಪರವಾಗಿಲ್ಲ ದಂಪತಿಗಳು ಎಂದರೆ ಹೀಗಿರಬೇಕು, ನೀವಿಬ್ಬರೂ ಅನ್ಯೋನ್ಯವಾಗಿ ಇದ್ದೀರಿ. ಈಗ ಆಸ್ಪತ್ರೆಯಲ್ಲೂ ಒಟ್ಟಿಗೆ ಇದ್ದೀರಿ ಪರವಾಗಿಲ್ಲ ಎಂದರು. ಬಹಳಷ್ಟು ಜನರು ನಿಮಗೆ ಆಕ್ಸಿಡೆಂಟ್ ಹೇಗೆ ಆಯಿತು ಎಂದು ವಿಚಾರಿಸುತ್ತಿದ್ದರು. ಪ್ರತಿಯೊಬ್ಬರಿಗೂ ಆಕ್ಸಿಡೆಂಟ್ ಹೇಗೆ ಆಯಿತು ಎಂದು ವಿವರಿಸಿ ವಿವರಿಸಿ ನಾವಿಬ್ಬರೂ ಸುಸ್ತಾಗಿದ್ದೆವು.

ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಮನೆಗೆ ಬಂದರೂ ನನಗಂತೂ ಹಾಸಿಗೆ ಬಿಟ್ಟು ಕದಲಾಡಬೇಡಿ ಎಂದು ಆದೇಶ ನೀಡಲಾಗಿತ್ತು. ನಮ್ಮ ಪೊಲೀಸ್ ಇಲಾಖೆಯ ಹಲವಾರು ಅಧಿಕಾರಿಗಳು ನನ್ನನ್ನು ಬಂದು ನೋಡಲು ಆರಂಭಿಸಿದರು. ಎಲ್ಲರದ್ದೂ ಒಂದೇ ಪ್ರಶ್ನೆ, ನಿಮಗೆ ಹೇಗೆ ಅನಿಸುತ್ತಿದೆ? ನಾನು ಕೊಡುತ್ತಿದ್ದುದು ಒಂದೇ ಒಂದು ಉತ್ತರ ನೀವುಗಳು ಕಳ್ಳರನ್ನು ಹಿಡಿದು ಅವನಿಗೆ ಲಾಕ್‌ಅಪ್‌ನಲ್ಲಿ ಮಲಗಿಸಿ ಕೈಗೆ ಕೋಳ ಹಾಕಿ, ಕಾಲಿಗೆ ಕೋಳ ಧರಿಸಿ ಅವನ ಹತ್ತಿರವೇ ಹೋಗದಿದ್ದರೆ ಅವನಿಗೆ ಯಾವ ಭಾವನೆ ಬರುತ್ತದೆಯೋ ಅದೇ ಭಾವನೆಯೇ ನನಗೂ ಬರುತ್ತಿದೆ ಎಂದೆ. ನಕ್ಕು ಸುಮ್ಮನಾಗುತ್ತಿದ್ದರು. ಪ್ರತಿದಿನವೂ ಚಕಚಕನೆಂದು

ಓಡಾಡುತ್ತಿದ್ದ ಒಬ್ಬ ವ್ಯಕ್ತಿಗೆ ಏಕಾಏಕಿ ಹಾಸಿಗೆಯಲ್ಲಿ ಕಡ್ಡಾಯವಾಗಿ ಮಲಗಿಸಿ ದಿಗ್ಬಂದನ ಹಾಕಿದರೆ ಅದಕ್ಕಿಂತ ಹೆಚ್ಚಿನ ಹಿಂಸೆ ಇಲ್ಲವೇ ಇಲ್ಲ ಎಂದು ನನಗನಿಸುತ್ತಿದೆ. ರಾಷ್ಟ್ರೀಯ ಮಾನವ ಹಕ್ಕು ಆಯೋಗವು ಇದನ್ನೂ ಒಂದು ರೀತಿಯ ಹಿಂಸೆಯಾಗಿ ಪರಿಗಣಿಸಬೇಕು ಎಂದೂ ಕೆಲವು ಪೊಲೀಸ್ ಅಧಿಕಾರಿಗಳಿಗೆ ಉತ್ತರಿಸುತ್ತಿದ್ದೆ.

ಪೊಲೀಸ್ ಇಲಾಖೆಯ ಅಧಿಕಾರಿಗಳ ನಂತರದ ಸರದಿ ನಮ್ಮದೇ ಬಂಧು-ಮಿತ್ರರದು. ಬಹಳ ಜನರಿಗೆ ಹಾಸಿಗೆ ಹಿಡಿದವನನ್ನು ನೋಡಲು ಹೋಗುವುದೇ ಒಂದು ರೀತಿಯ ಪಿಕ್‌ನಿಕ್ ಎಂದು ನನಗೆ ತೋರುತ್ತದೆ. ನಾನು ಹಾಸಿಗೆಯಲ್ಲಿ ಸೂರು ನೋಡುತ್ತಾ ಮಲಗಿದ್ದರೆ ನನ್ನನ್ನು ನೋಡಲು ಬಂದ ಬಂಧು-ಮಿತ್ರರು ಆರಾಮವಾಗಿ ಕಾಫಿ, ಜ್ಯೂಸ್, ಚಿಪ್ಸ್, ಖಾರದ ಗೋಡಂಬಿ ಸೇವಿಸುತ್ತಾ ಇಡೀ ಪ್ರಪಂಚದ ಆಗುಹೋಗುಗಳ ಬಗ್ಗೆ ಮಾತನಾಡುವುದನ್ನು ಕೇಳಿದಾಗ ಒಂದು ರೀತಿಯ ಸಿಟ್ಟು ಬರುತ್ತಿತ್ತು. ವಿಶ್ವದ ವಿಶೇಷ ವಿಷಯಗಳನ್ನೆಲ್ಲಾ ಮಾತನಾಡಿ ಮುಗಿಸಿದಾಗ ನನ್ನ ಬಂಧುಗಳಿಗೆ ಇದ್ದಕ್ಕಿದ್ದಂತೆ ನನ್ನ ಪರಿಸ್ಥಿತಿಯ ಬಗ್ಗೆ ಗಮನ ಹರಿಯುತ್ತಿತ್ತು.

ಅಯ್ಯೋ ಪಾಪ ಇವನು ಎಷ್ಟು ಆಕ್ಟಿವ್ ಆಗಿ ಇದ್ದ. ಒಂದು ದಿನವೂ ಅರ್ಧಗಂಟೆಗಿಂತ ಹೆಚ್ಚು ಕಾಲ ಒಂದು ಜಾಗದಲ್ಲಿ ಕೂಡುತ್ತಿರಲಿಲ್ಲ, ಅಂಡು ಸುಟ್ಟ ಬೆಕ್ಕಿನಂತೆ ಆಡುತ್ತಿದ್ದ. ಇವನಿಗೆ ಈಗ ದೇವ್ರು ಕಟ್ಟಿ ಹಾಕಿಬಿಟ್ಟನಲ್ಲ ಪಾಪ ಎಂದು ಅನುಕಂಪ ತೋರಿಸುತ್ತಾ ಇದ್ದರು. ನನಗೆ ಕೇಳಲಾಗದೇ ಕೋಪ ಬಂದು ರೀ, ನಾನೇನು ಅಂಡು ಸುಟ್ಟುಕೊಂಡ ಬೆಕ್ಕಿನಂತೆ ಇರಲಿಲ್ಲ, ಆದರೆ ಏನು ಮಾಡುವುದು ಬೆಕ್ಕಿನಂತೆ ನನಗೂ ಗಾಯವಾಗಿರುವುದು ಪೃಷ್ಟದ ಮೇಲೆಯೇ, ಏಳುವ ಹಾಗಿಲ್ಲ ಅನುಭವಿಸುವ ಹಾಗಿಲ್ಲ ಎಂದು ಉತ್ತರಿಸಿದರೆ ಎಲ್ಲರೂ ಗೊಳ್ಳ್ ಎಂದು ನಗುತ್ತಿದ್ದರು. ನನಗೋ ಕೋಪ ಇನ್ನೂ ಹೆಚ್ಚಾಗುತ್ತಿತ್ತು. ಪುಗಸಟ್ಟೆ ಕಾಫಿ ತಿಂಡಿ ಮೇಯ್ದು ನನಗೇ ಹಂಗಿಸ್ತೀರಲ್ಲಾ ಅಂತ ಬೈಯ್ದು ಅವರನ್ನು ಹೊರಗೆ ಅಟ್ಟುತ್ತಿದ್ದೆ.

ನನ್ನನ್ನು ಬಂದು ನೋಡುವವರಲ್ಲಿ ಮಕ್ಕಳು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಿದ್ದರು. ನಮ್ಮ ಪಕ್ಕದ ಮನೆಯ ಶೈನಾಳಿಗೆ ನಾನು ಪ್ರೀತಿಯ ಅಂಕಲ್. ಅವಳು ಬಂದು ನನ್ನನ್ನು ಪ್ರಶ್ನಿಸಿದ್ದು ನಾನು ಮರೆಯುವ ಹಾಗೆಯೇ ಇಲ್ಲ. ಅಂಕಲ್ ನಿಮಗೆ ಆಕ್ಸಿಡೆಂಟ್ ಆಗುವ ಸಂದರ್ಭದಲ್ಲಿ ನೀವು ಸತ್ತು ಹೋಗುತ್ತೀರಿ ಎಂದೇ ಭಾವಿಸಿದ್ದಿರಾ, ಸಾವು ಎನ್ನುವುದು ಹೇಗಿರುತ್ತದೆ ಎಂದು ಕೇಳಿದಾಗ ನನಗೆ ಮಾತೇ ಹೊರಡಲಿಲ್ಲ. ನಿಜವಾಗಲೂ ನನ್ನ ವಾಹನಕ್ಕೆ ಬಸ್ ಎದುರಿನಿಂದಲೇ ಗುದ್ದಿದಾಗ ನನಗಂತೂ ಜೀವನ ಮರಣದ ವಿಚಾರವೇ ತಲೆಯಲ್ಲಿ ಬಂದಿರಲಿಲ್ಲ, ಪ್ರತಿ ಕ್ಷಣವೂ ನಾನು ಎಚ್ಚರವಾಗಿಯೇ ಇದ್ದೆ. ಪ್ರತಿದಿನವೂ ಶೈನಾ ಬಂದು ನನ್ನ ಮುರಿದ ಕೈನ ಹಾವಭಾವವನ್ನು ಅಣಕಿಸಿ ತೋರಿಸುತ್ತಿದ್ದಳು. ನನಗಂತೂ ಟೈಮ್ ಪಾಸ್ ಆಗುತ್ತಿತ್ತು. ಏತನ್ಮಧ್ಯೆ ನನ್ನನ್ನು ನೋಡಲು ಡಾಕ್ಟರೂ ಬರುತ್ತಿದ್ದರು. ನಾನು ಮನೆಯಲ್ಲಿ ಇರುತ್ತಿದ್ದುದರಿಂದ ನನ್ನ ಸುತ್ತಲು ನನ್ನನ್ನು ನೋಡಲು ಬಂದ ಬಂಧು-ಮಿತ್ರರೇ ಇರುತ್ತಿದ್ದರು. ಇವರೆಲ್ಲರ ಮುಂದೆ ಡಾಕ್ಟರ್ ಜೊತೆ ಮಾತನಾಡುವುದೇ ಒಂದು ದೊಡ್ಡ ಕಷ್ಟ ಆಗುತ್ತಿತ್ತು. ಜನರನ್ನು ನೀವು ಹೊರಗಡೆ ಹೋಗಿ ಎನ್ನುವ ಹಾಗಿಲ್ಲ, ಡಾಕ್ಟರನ್ನು ಪ್ರಶ್ನೆ ಕೇಳುವ ಹಾಗಿಲ್ಲ,

ಡಾಕ್ಟರ್ ಒಂದು ಸಲಹೆ ಕೊಟ್ಟರೆ ಸುತ್ತಲೂ ಇದ್ದವರು ಅದನ್ನು ಅನುಮೋದಿಸಿ ಅದಕ್ಕೆ ತಮ್ಮದೊಂದು ಸಲಹೆ ಸೇರಿಸಿ ಹೇಳುವವರೇ. ನಿಜವಾಗಲೂ ಪಜೀತಿ ಅನಿಸಿಬಿಡುತ್ತಿತ್ತು.

ಮೂಳೆ ಮುರಿದ್ದಿದ್ದರಿಂದ ನನಗೆ ಡಾಕ್ಟರ್ ಯಾವುದೇ ಪಥ್ಯ ಹೇಳದಿದ್ದರೂ ನನ್ನನು ನೋಡಲು ಬರುವವರೆಲ್ಲರೂ ತಲಾ ಒಂದೊಂದು ಪಥ್ಯ ಹೇಳುತ್ತಿದ್ದರು. ನಿಮಗೆ ಮೂಳೆ ಮುರಿದಿದೆ, ಕ್ಯಾಲ್ಷಿಯಮ್ ಮಾತ್ರೆ ತೆಗೆದುಕೊಳ್ಳಿ ಎಂದು ಹೇಳುವವರ ಸಂಖ್ಯೆ ಹೆಚ್ಚಾದರೆ ಕೆಲವರು ಹಾಲನ್ನು ಕುಡಿಯಿರಿ. ಮೊಟ್ಟೆ ತಿನ್ನಿ, ಮೊಸರು ಸೇವಿಸಿ ಎಂದು ಹೇಳುತ್ತಿದ್ದರು. ಉತ್ತರ ಕನ್ನಡದಿಂದ ಬಂದಿದ್ದ ಸ್ನೇಹಿತ ನಮ್ಮ ಊರಿನ ಕಡೆ ಕಹಿ ಕಷಾಯ ಮಾಡುತ್ತಾರೆ ಅದು ಕುಡಿಯಲಿಕ್ಕೆ ಆಗುವುದಿಲ್ಲ, ಆದರೆ ದಿನವೂ ಅರ್ಧ ಕಪ್ ಕುಡಿದರೆ ಒಂದೇ ವಾರದಲ್ಲಿ ನಿಮ್ಮ ಮೂಳೆಗಳು ಕೂಡಿಕೊಳ್ಳುತ್ತವೆ ಎಂದ. ನಮ್ಮ ಪೊಲೀಸ್ ಅಧಿಕಾರಿಯೊಬ್ಬ ಹೇಳಿದ ಪಥ್ಯ ಕೇಳಿ ನನಗಂತೂ ನಗೆಯೇ ಬಂದಿತು. ನಮ್ಮ ಊರಿನ ಕಡೆ ಮೂಳೆ ಮುರಿದಾಗ ಕುರಿ ಕಾಲಿನ ಸೂಪ್ ಮಾಡಿ ಕೊಡುತ್ತಾರೆ. ಒಂದು ಫ್ಲಾಸ್ಕ್‌ನಲ್ಲಿ ಮಾಡಿ ತಂದು ಕೊಡಲೇ ಎಂದ. ಶುದ್ಧ ಶಾಖಾಹಾರಿಯಾದ ನನಗೆ ಸೂಪ್ ನೆನಸಿಕೊಂಡೇ ವಾಕರಿಕೆ ಬರುವ ಹಾಗಾಯಿತು. ಕಡೆಗೆ ಯಾವ ಪಥ್ಯವನ್ನೂ ಮಾಡದೇ ನನ್ನದೇ ಪಥ್ಯ ಅನುಸರಿಸಿದೆ.

ನನ್ನನ್ನು ನೋಡಲು ಬರುವವರೆಲ್ಲಾ ಕೈಯಲ್ಲಿ ಹೂವು ಹಣ್ಣು ಹಿಡಿದುಕೊಂಡು ಬರುವವರೇ. ನನ್ನ ಕೋಣೆಯಂತೂ ಹೂ ಮಾರುವ ಅಂಗಡಿಯಂತೆ ಕಾಣುತ್ತಿತ್ತು. ಎರಡು ದಿನವಾದ ಬಳಿಕ ಎಂತಹ ಒಳ್ಳೆ ಪುಷ್ಪ ಗುಚ್ಚವಾಗಲೀ ಒಂದು ರೀತಿಯ ವಾಸನೆ ಬರುತ್ತದೆ. ಆ ವಾಸನೆ ತಡೆದುಕೊಂಡು ಮಲಗುವುದೇ ಒಂದು ವಿಚಿತ್ರ ಅನುಭವ. ಆ ನಂತರ ಎಲ್ಲರಿಗೂ ಹೇಳಿದೆ – ದಯವಿಟ್ಟು ಹೂ ತರಬೇಡಿ, ಬೇಕೆಂದರೆ ನನಗೊಂದು ಪುಸ್ತಕ ಕೊಡಿ ಎಂದು.

ಆ ಮೇಲೆ ನೋಡಬೇಕು – ಪ್ರತಿಯೊಬ್ಬರೂ ತಮ್ಮ ಕೈಯಲ್ಲಿ ಭಗವದ್ಗೀತೆ, ರಾಮಾಯಣ, ಮಹಾಭಾರತ, ಗೀತೋಪದೇಶ ಇತ್ಯಾದಿ ಆಧ್ಯಾತ್ಮಿಕ ಪುಸ್ತಕಗಳನ್ನು ಹಿಡಿದುಕೊಂಡು ಬರುವವರೇ. ಒಂದು ವಾರದಲ್ಲಿ ಭಗವದ್ಗೀತೆ ಕಾಪಿಗಳೇ ಹತ್ತು ಶೇಖರವಾದವು ಅವನ್ನು ವಿತರಿಸುವುದೇ ದೊಡ್ಡ ಪ್ರಾಬ್ಲಂ ಆಯಿತು. ನನಗೂ ಆಧ್ಯಾತ್ಮಕ್ಕೂ ಅಂತರ ಬಹಳ ಎಂದು ಬಹಳ ಜನರಿಗೆ ಗೊತ್ತಿಲ್ಲ ಅನಿಸುತ್ತದೆ.

ಅಂತೂ ಇಂತೂ ಮೊದಲಿನಂತಾದಾಗ ಬದುಕಿದೆಯಾ ಬಡಜೀವವೇ ಎಂದು ನಿಟ್ಟುಸಿರಿಟ್ಟೆ.

---

**ಲೇಖಕರಲ್ಲಿ ವಿನಂತಿ**

ದಯವಿಟ್ಟು ನಿಮ್ಮ ಲೇಖನಗಳನ್ನು ನುಡಿ ಅಥವಾ ಬರಹ ತತ್ರಾಂಶ ಬಳಸಿ ಕಳುಹಿಸಿ. ಹಸ್ತಪ್ರತಿಯನ್ನು ಸ್ವೀಕರಿಸುವುದು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮ ಸಹಕಾರಕ್ಕಾಗಿ ಧನ್ಯವಾದಗಳು.

# ಸಂಸ್ಕೃತದಲ್ಲಿ ಹಾಸ್ಯ

**- ಮಹಾಬಲ ಭಟ್**

**ಇ**ದೇನ್ ಸ್ವಾಮಿ ದೇವಭಾಷೆಯಲ್ಲೂ ಹಾಸ್ಯ? ಎಂದು ಹುಬ್ಬೇರಿಸಬೇಡಿ. ನವರಸಗಳಲ್ಲಿ ಹಾಸ್ಯವೂ ಒಂದು ತಾನೆ? ಸಂಸ್ಕೃತ ಭಾಷೆ ನವರಸ ಭರಿತವಾದದ್ದರಿಂದ ಇಲ್ಲಿ ಹಾಸ್ಯವೂ ಇರಲೇಬೇಕು. ಜನಸಾಮಾನ್ಯರಿಗೂ ವಿನೋದವನ್ನು ನೀಡುವ ಈ ರಸವನ್ನು ಹೀರುವುದೆಂದರೆ ಎಲ್ಲರಿಗೂ ಹಿಗ್ಗು. ಸಂಸ್ಕೃತದಲ್ಲಿ ಅನೇಕ ಹಾಸ್ಯ ಶ್ಲೋಕಗಳಿವೆ. ಆದರೆ ಅವುಗಳಲ್ಲಿ ಮೇಲ್ನೋಟಕ್ಕೇ ಹಾಸ್ಯ ಗೋಚರವಾಗುತ್ತದೆಂದಿಲ್ಲ. ಕೆಲವೊಂದು ಶ್ಲೋಕಗಳ ಮರ್ಮ ಭಾಷಾಂತರಕ್ಕೆ ನಿಲುಕಲಾರದು. ಆದರೂ ಕೆಲವನ್ನು ಆರಿಸಿ ಉದಾಹರಿಸಿ, ಭಾಷಾಂತರಿಸಿ, ನಿಮ್ಮ ಮುಂದಿರಿಸುವ ಪ್ರಯತ್ನ ಮಾಡ್ತೇನೆ. ಈ ಶ್ಲೋಕಗಳಲ್ಲಿ ಕೇವಲ ಮನಕ್ಕೆ ಮುದನೀಡುವ ಹಾಸ್ಯ ಒಂದೇ ಅಲ್ಲದೆ ಚಿಂತನೆಯ ಕಿಚ್ಚು ಹಚ್ಚುವ ವಿಡಂಬನೆಯೂ ಸೇರಿದೆ.

ನನ್ನ ಲೇಖನವನ್ನು ಎಲ್ಲರಿಗೂ ಪ್ರಿಯವಾದ ವಿವಾಹದೊಂದಿಗೇ ಆರಂಭಿಸುತ್ತೇನೆ. ಇದು ಮನುಷ್ಯರ ವಿವಾಹದ ಕತೆಯಲ್ಲ, ಒಂಟೆಗಳ ವಿವಾಹದ ಕಥೆ.

ಉಷ್ಟ್ರಾಣಾಂ ಚ ವಿವಾಹೇಷು ಗೀತಂ ಗಾಯಂತಿ ಗಾರ್ದಭಾಃ।

ಪರಸ್ಪರಂ ಪ್ರಶಂಸಂತಿ ಅಹೋರೂಪಮಹೋ ಧ್ವನಿಃ॥

ಒಂಟೆಗಳ ಮದುವೆಯಲ್ಲಿ ಕತ್ತೆಗಳ ಹಾಡಂತೆ. ಕತ್ತೆ ಒಂಟೆಯ ನೋಡಿ ಹಾಡಿತು – 'ಹಾ ಎಂಥಾರೂಪ!' ಕತ್ತೆಯ ಧ್ವನಿ ಕೇಳಿ ಒಂಟೆ ಹೇಳಿತು, 'ಆಹಾ! ಎಂಥ (ಸುಮಧುರ) ಧ್ವನಿ!!' ಹೇಗಿದೆ ಪರಸ್ಪರ ಪ್ರಶಂಸೆ? ಮದುವೆ ವಿಷಯ ಬಂದಾಗ ಅಳಿಯನ ವಿಷ್ಯಾನೂ ಮಾತಾಡ್ಲೇಬೇಕು. ಅಳಿಯನ್ನ ಹತ್ತನೇ ಗ್ರಹ ಅಂತ ಕರೀತಾರೆ ಅಂತ ನಿಮಗೆಲ್ಲ ಗೊತ್ತು. ಆದರೆ ಈ ಗ್ರಹದ ವೈಶಿಷ್ಟ್ಯ ಗೊತ್ತೆ?

ಸದಾ ದುಷ್ಟ ಸದಾ ರುಷ್ಟ ಸದಾ ಪೂಜಾಮಪೇಕ್ಷತೇ!

ಕನ್ಯಾರಾಶಿ ಸ್ಥಿತೋ ನಿತ್ಯಂ ಜಾಮಾತಾ ದಶಮೋ ಗ್ರಹಃ॥

ನವಗ್ರಹಗಳಲ್ಲಿ ಎಲ್ಲವೂ ಯಾವಾಗಲೂ ದುಷ್ಟವಲ. ಆದರೆ ಇವನು ಮಾತ್ರ ಸದಾ ದುಷ್ಟ. ಉಳಿದ ಗ್ರಹಗಳು ಕೆಲವು ಸಂದರ್ಭಗಳಲ್ಲಿ ಮಾತ್ರ ಸಿಟ್ಟಾದರೆ ಇವನು ಮಾತ್ರ ಯಾವಾಗ ಕೋಪಿಷ್ಟ. ಉಳಿದ ಗ್ರಹಗಳು ಯಾವಾಗಲೂ ಪೂಜೆಯನ್ನು ಅಪೇಕ್ಷಿಸುವುದಿಲ್ಲ. ಆದರೆ ಇವನಿಗೆ ಮಾತ್ರ ಸದಾ ಪೂಜೆ ಬೇಕು. ಬಾಕಿ ಗ್ರಹಗಳು ರಾಶಿಯಿಂದ ರಾಶಿಗೆ ಚಲಿಸಿದರೆ ಈ ಗ್ರಹ ಮಾತ್ರ 'ಕನ್ಯಾ' ರಾಶಿಯಲ್ಲೇ ನಿಶ್ಚಲ. 'ಅಳಿಯ ಮನೆ ತೊಳೆಯ' ಅಲ್ಲವೆ?

ಮುಖ ತೊಳೆದ ಮೇಲೆ ನಾವು ದೇವರಿಗೆ ಕೈ ಮುಗೀತೇವೆ. ನಾನಂತೂ ಗಣಪತಿಗೆ ಕೈ ಮುಗೀತೇನೆ. ಅಲ್ಲ ಮಾರಾಯ್ರೇ ಈ ದೇವರು ಗಣೇಶ ಬೆಕ್ಕಿಗೆ ಕೈ ಮುಗೀತಾನಂತೆ ಯಾಕೆ ಗೊತ್ತಾ?

ಗಣೇಶಃ ಸ್ತೌತಿ ಮಾರ್ಜಾರಂ ಸ್ವವಾಹಸ್ಯಾಭಿರಕ್ಷಣೇ!

ಗೊತ್ತಾಗ್ಲಿಲ್ವಾ? ಅವನ ವಾಹನ ಇಲಿ ಅಲ್ವೇನ್ರಿ! ಅದರ ರಕ್ಷಣೆ ಆಗಬೇಕು ಅಂತಾದರೆ ಬೆಕ್ಕಿಗೆ ಶರಣಾಗಬೇಕು ತಾನೆ?..

ನಮ್ಮ ಜನ ದೇವ್ರನ್ನೂ ತಗೊಂಡೇ ವಿನೋದ ಮಾಡ್ತಾರೆ ನೋಡಿ. ನೀವು ಲಕ್ಷ್ಮೀದೇವಿ ಚಿತ್ರ ನೋಡಿದ್ದೀರಿ ತಾನೆ?

ಅವಳಿರೋದು ಎಲ್ಲಿ? ಕಮಲದ ಹೂವಿನ ಮೇಲೆ, ಶಿವ ಇರೋದೆಲ್ಲಿ? ಹಿಮದ ಆಲಯದಲಿ, ವಿಷ್ಣು ಮಲಗೋದೆಲ್ಲಿ?

ಕ್ಷೀರಸಾಗರದಲಿ. ಇವರೆಲ್ಲ ಯಾಕೆ ನೆಲದ ಮೇಲೆ ಹಾಸಿಗೆ ಹಾಸಿ ಮಲಗೋದಿಲ್ಲ ಗೊತ್ತಾ?

ಕಮಲೇ ಕಮಲಾ ಶೇತೇ ಹರಃ ಶೇತೇ ಹಿಮಾಲಯೇ

ಕ್ಷೀರಾಬ್ಧೌಚ ಹರಿಃ ಶೇತೇ ಮನ್ಯೇ ಮತ್ಕುಣಶಂಕಯಾ।

ಉತ್ತರ ತಿಳೀಲಿಲ್ವಾ? ತಿಗಣೆಗೆ ಹೆದರಿ ಸ್ವಾಮಿ! ಹೋಗ್ಲಿ ಬಿಡಿ ದೇವರು ಸಿಟ್ಟಾದಾನು. ಸರಕಾರಿ ಕೆಲಸ ದೇವರ ಕೆಲಸ ಅಂತ ಎಲ್ಲೋ ಓದಿದ್ದ ನೆನಪು. ನಾನು ಒಂದಿನ ದೇವಸ್ಥಾನಕ್ಕೆ ಹೋಗೋ ಬದ್ಲು ಸರಕಾರಿ ಕಛೇರಿಗೆ ಹೋಗ್ಬಿಟ್ಟಿದ್ದೆ. ನಾ ಓದಿದ್ದು ಸುಳ್ಳಲ್ಲ ಅನ್ನಿಸ್ತು ನನಗೆ. ಯಾಕೆಂದ್ರೆ ಅಲ್ಲಿರುವವರೆಲ್ಲ 'ಪ್ರಸಾದ' ತಿನ್ನೋದರಲ್ಲಿ ಬಹಳಾ ನಿಪುಣರು.

ಅದರೊಳಗೊಬ್ಬ ಗುಮಾಸ್ತ ಅಂತೂ ತಿನ್ನೋದ್ರೊಳಗೆ ಬಹಳಾ ಬುದ್ಧಿವಂತ. ಇವನು ತಾಯಿ ಹೊಟ್ಟೇಲಿರುವಾಗ ಅವಳ ಕರುಳನ್ನೇ ಯಾಕೆ ತಿನ್ನಿಲ್ಲ ಅಂತ ಆಶ್ಚರ್ಯ ಆಯ್ತು. ಛೆ! ತಾಯಿಗಿಂತ ದೇವರಿಲ್ಲ ಅಲ್ವೆ? ಅಲ್ಲಲ್ಲ.... ಅದಕ್ಕಾಗಿ ಅಲ್ಲ....

ಕಾಯಸ್ಥೇನೋದರಸ್ಥೇನ ಮಾತುರಾಮಿಷಶಂಕಯಾ।

ಆಂತ್ರಾಣಿ ಯನ್ನ ಭುಕ್ತಾನಿ ತತ್ರ ಹೇತುರದಂತತಾ॥

ಆಗ ಅವನಿಗೆ ಹಲ್ಲೆಲ್ಲಿತ್ತು ಸರ್! ಸುಲಭವಾಗಿ ಧನಸಂಪಾದನೆ ಮಾಡೋ ಇಂಥಾ ಉದ್ಯೋಗ ಇರಬೇಕು ನೋಡಿ. ನಮ್ಮ ಅದೃಷ್ಟ ಬೆಕ್ಕಿನ ಹಾಗೆ ಇರಬೇಕಂತೆ. ಈ ಶ್ಲೋಕ ಹಾಗೂ ಅದಕ್ಕೆ ಪಾ.ವೆಂ. ಆಚಾರ್ಯರು ಮಾಡಿದ ಸೊಗಸಾದ ಭಾಷಾಂತರ ನೋಡಿ.

ಉದ್ಯೋಗಃ ಖಲು ಕರ್ತವ್ಯಃ ಫಲಂ ಮಾರ್ಜಾರವದ್ಭವೇತ್।

ಜನ್ಮಪ್ರಭೃತಿ ಗೌರ್ನಾಸ್ತಿ ಪಯಃ ಪಿಬತಿ ನಿತ್ಯಶಃ॥

ಬಿಡದೆ ಸಾಧನೆ ಮಾಡು ಮಾರ್ಜಾಲವನು ನೋಡು;

ಹಸುವ ಸಾಕಿದೆಯೆ ಅದು ನಿತ್ಯ ಕುಡಿಯದೆ ಹಾಲು?

ಕನ್ನಡದ ರಸಋಷಿ ಡಿ.ವಿ. ಗುಂಡಪ್ಪನವರು ಕೃಷ್ಣಾಚಾರ್ಯರೆಂಬ ಸಜ್ಜನ ಮಾಧ್ವರನ್ನು ವ್ಯಾಕರಣ ಕಲಿಯುವುದಕ್ಕಾಗಿ ಆಶ್ರಯಿಸಿದ್ದರಂತೆ. ಅವರು ತನಗೆ ವ್ಯಾಕರಣ ವೇದಾಂತಗಳು

ತಲೆಗೆ ಹತ್ತಲಿಲ್ಲ, ಆದರೆ ಕೃಷ್ಣಾಚಾರ್ಯರ ಮನೆಯ ಅಡಿಗೆಯ ರುಚಿ ನಾಲಿಗೆಗೆ ಹತ್ತಿತು ಎಂಬುದನ್ನು ಸಂಸ್ಕೃತ-ಕನ್ನಡ ಮಿಶ್ರಿತ ಶ್ಲೋಕದಲ್ಲಿ ಹೇಳಿದ ಅಂದವನ್ನು ನೋಡಿ.

ನ ವೇದಾಂತೇ ಗಾಢಾ ನ ಚ ಪರಿಚಿತಂ ಶಬ್ಧಶಾಸ್ತ್ರಂ

ನ ವಾ ತರ್ಕೇ ವೇದೇ ನ ಚ ಸರಸತಾ ಕಾವ್ಯನಿವಹೇ।

ವಯಂ ಶ್ರೀಮದ್ಬ್ಯಾ ಳೀಹುಳಿಪಳದ್ಯಕೊಸಂಬ್ರಿತೊವ್ವೀ

ಹಯಗ್ರೀವಾಂಬೋಡೀಕರಿಗಡುಬುಚಿತ್ರಾನ್ನಚತುರಾಃ॥

ಸಾಕು ಮುಗಿಸಿ ಮಾರಾಯ್ರೆ ನಿಮ್ಮ ಪುರಾಣ ಅನ್ನೋದಕ್ಕಿಂತ ಮೊದಲೇ ಮುಗಿಸ್ತೇನೆ ಸ್ವಾಮಿ. ಇಷ್ಟೆಲ್ಲ ಓದ್ಕೊಂಡೂ ನಗ್ದಿದ್ರೆ ನಿಮಗೆ ದೊಡ್ಡ ನಮಸ್ಕಾರ.

**ಸೌಜನ್ಯ: ಗೋವಾ ಜನನುಡಿ**

---

# ಲೇಖನ

**ಅಪ್ಪ ಅಮ್ಮಂದಿರ ಬಗೆಗೆ ಒಂದು ಪುಟದ ಪುಟ್ಟ ಲೇಖನ ಬರೆಯಿರಿ ಎಂದು ಟೀಚರ್ ಕೊಟ್ಟಿದ್ದ ಪ್ರಶ್ನೆಗೆ ಎಲ್ಲ ಹುಡುಗರೂ ಉತ್ತರ ಬರೆದಿದ್ದರು. ಆದರೆ ಒಬ್ಬ ಹುಡುಗ ಬರೆದಿದ್ದು ಹೀಗೆ.**

**ನೀವು ಹೇಳಿರುವ ಅಪ್ಪ ಅಮ್ಮ ಅಂದ್ರೆ ಯಾರು ಅಂತ ನನಗೆ ಗೊತ್ತಿಲ್ಲ. ನನಗೆ ಅಂಥವರು ಯಾರೂ ಇಲ್ಲ. ಆದರೆ ನೀವು ಹೇಳಿರುವ ಅಪ್ಪ ಅಮ್ಮ ಎನ್ನುವ ಇಬ್ಬರ ಬದಲಿಗೆ ಬೇರೆ ಇಬ್ಬರು ನಮ್ಮನೇಲಿ ಇದಾರೆ. ಅವರು ನನಗೆ ಡ್ಯಾಡಿ ಮತ್ತು ಮಮ್ಮಿ ಆಗಬೇಕು. ನಾನು ಒಂದೊಂದು ಸಾರೆ ಮಮ್ಮಿಯನ್ನು ಮೋಮ್ ಅಂತ ಕರೀತೀನಿ. ಅದು ಅವಳಿಗೆ ಇಷ್ಟ. ಡ್ಯಾಡಿಯನ್ನು ಡ್ಯಾಡ್ ಅಂತೀನಿ ಅದಕ್ಕೆ ಅವರೂ ಸಂತೋಷಪಡುತ್ತಾರೆ. ಮಮ್ಮಿ ಮನೇಲಿ ಅಡಿಗೆ ಮಾಡೋದೇ ಇಲ್ಲ ಡ್ಯಾಡಿಗೇ ಮಾಡು ಅಂತ ಹೇಳ್ತಾರೆ. ಡ್ಯಾಡೀನೂ ಮಾಡಲ್ಲ. ಹೀಗಾಗಿ ನನಗೆ ಹೊರಗಡೆ ಊಟ ತಿಂಡಿ ಅಭ್ಯಾಸ ಆಗಿದೆ... ಹೀಗೇ ಒಂದು ಪುಟದಷ್ಟು ಬರೆದಿತ್ತು.**

**- ಸುಕೇಶವ**

ನೀವು ಕೇಳಿರದೇ ಇರಬಹುದಾದ

# ಅಜ್ಜಿ ಕತೆಗಳು

‘‘**ಶೇ**ಮ್ ಶೇಮ್, ಪಪ್ಪಿ ಶೇಮ್....’’

ಸ್ನಾನದ ಮನೆಯಿಂದ ಹೊರಗೆ ಬಂದ ಮೊಮ್ಮಗ ಅಜ್ಜಿಯ ಎದುರಿಗೆ ನಿಂತಿದ್ದ. ಮೈಮೇಲೆ ಯಾವುದೇ ವಸ್ತ್ರವಿರಲಿಲ್ಲ, ಅದಕ್ಕೆ ಅಜ್ಜಿಯಿಂದ ಈ ಮೂದಲಿಕೆಯ ನುಡಿ! ಅದನ್ನು ಕೇಳಿದ ಮೊಮ್ಮಗ ನಾಚಿಕೆಯಿಂದ ಮುದುರಿ, ‘‘ಹೋಗಜ್ಜೀ, ನಾನು ಚಿಕ್ಕವನಾಗಿದ್ದಾಗಿನಿಂದಲೂ ಹೀಗೇ ಜೀವ ತಿನ್ನೋ ತಮಾಷೆ ಮಾಡತಿರತೀ..’’ ಎಂದ.

‘‘ಛೀ, ಮರೆಗುಳಿ ಮುಂಡೇದ್ದೇ! ಮೀಸೆ ದಾಡಿ ಬರೋ ಅಷ್ಟು ದೊಡ್ಡವನಾಗಿದ್ದೀಯಾ, ಆದರೂ ಈ ರೀತಿ ಬೆತ್ತಲೆ ನಿಂತಿದ್ದೀ. ನೋಡು, ಅಲ್ಲಿಯೇ ಗಳುವಿನ ಮೇಲೆ ನನ್ನ ಬಿಳಿ ಸೀರೆ ಇದೆ ಅದನ್ನೇ ದಟ್ಟಿ ಪಂಚೆ ಥರ ಉಟ್ಕೊಂಡು ಸುಧಾರಿಸಿಕೋ.’’

‘‘ತುಂಬಾ ಥ್ಯಾಂಕ್ಸ್ ಅಜ್ಜೀ. ಅಜ್ಜೀ ಇವೊತ್ತು ಏನಾಯ್ತೂ ಅಂದ್ರೆ, ಬಹಳ ದಿನಗಳಿಂದ ನನ್ನ ತಲೆ ತಿನತಾ ಇದ್ದ ಒಂದು ಸಮಸ್ಯೆಗೆ ಉತ್ತರ ಹೊಳೆದು ಬಿಟ್ಟು. ಸ್ನಾನದ ತೊಟ್ಟಿಯಲ್ಲಿ ನಾನು ಮುಳುಗಿದ್ದೆನಲ್ಲಾ ಆವಾಗ ನನ್ನ ಮೈಯಷ್ಟು ಗಾತ್ರದ ನೀರು ತೊಟ್ಟಿಯಿಂದ ಹೊರಗೆ ಚೆಲ್ತದೆ ಅನ್ನೋ ಸತ್ಯವನ್ನ ಕಂಡು ಹಿಡಿದೆ. ಅದಕ್ಕೇನೇ ಮೈಮೇಲೆ ಅರಿವೆ ಇಲ್ಲ ಅನ್ನೋದರ ಅರಿವೇ ಇಲ್ಲದ ಹಾಗಾಗಿತ್ತು.’’

‘‘ಅಯ್ಯೋ ಪೆದ್ದ ಮುಂಡೇದೇ! ದಿನಾಲೂ ಮಲಕ್ಕೊಳ್ಳೋ ಮುಂಚೆ ‘ಅಜ್ಜೀ ಕತೆ ಹೇಳು’ ಅಂತ ಕಾಡತಿದ್ದೆಯಲ್ಲ, ಆದರೆ ನಾನು ಕತೆ ಪೂರಾ ಮುಗಿಸೋ ಮುಂಚೇನೇ ಕುಂಭಕರ್ಣನ ತರಹ ಗೊರಕೆ ಹೊಡೆಯೋಕೆ ಶುರುಮಾಡಿರತಿದ್ದೀ. ನಾನು ಕಾಗೆ ಕತೆ ಹೇಳಲಿಲ್ಲವೇನೋ? ಅದರಲ್ಲಿ ನೀರಡಿಸಿ ಬಂದ ಕಾಗೆ ಕೊಡದಲ್ಲಿ ಒಂದೊಂದೇ ಕಲ್ಲು ಹಾಕಿತು. ಆ ಕತೇನ ಸರಿಯಾಗಿ, ಲಕ್ಷ್ಯಗೊಟ್ಟು ಕೇಳಿಸಿಕೊಂಡಿದ್ದರೆ ನೀರು ಮೇಲೆ ಹೇಗೆ ಬಂತು ಅನ್ನೋದು ನಿನಗೆ ಆವಾಗಲೇ ಹೊಳೆದಿರುತ್ತಿತ್ತು. ಇವತ್ತು ನಿನ್ನ ಈ ಗೊಮ್ಮಟೇಶ್ವರನ ಅವತಾರ ನೋಡುವದು ತಪ್ಪಿರುತ್ತಿತ್ತು.’’

‘‘ಹೌದಲ್ಲ ಅಜ್ಜೀ, ನಿನ್ನ ಮಾತು ನಿಜ. ನಾನು ಆವಾಗ ಅದನ್ನ ಗಮನಿಸಿರಲೇ ಇಲ್ಲ..’’

‘‘ಸರಿ ಬಿಡು ಆದದ್ದು ಆಗಿ ಹೋಯ್ತು. ಈಗ ಮಧ್ಯಾಹ್ನ ಊಟಕ್ಕೆ ಅವರೆಕಾಳು ಸಾರು ಮಾಡಬೇಕು ಅಂದುಕೊಂಡಿದೀನಿ. ಅಲ್ಲಿ ರಸ್ತೆಯಲ್ಲಿ ಅವರೆ ಕಾಯಿ ಮಾರೋನು ಹೋಗ್ತಾ ಇದ್ದಾನೆ ನೋಡು, ಅವನನ್ನ ಸ್ವಲ್ಪ ಕೂಗು...’’

ಮೊಮ್ಮಗ ರಸ್ತೆಯವರೆಗೆ ಹೋಗಿ ನಿಂತು ‘‘ಔರೇಕಾಯ್, ಔರೇಕಾಯ್, ಔರೇಕಾಯ್,’’ ಎನ್ನುತ್ತ ಕೂಗಿದ. ಅದನ್ನು ಕೇರಿಯವರೆಲ್ಲರೂ ಕೇಳಿಸಿಕೊಂಡರಂತೆ. ಇವನ ಉಚ್ಚಾರ ಹಾಗಿತ್ತೋ ಅಥವಾ ಅವರ ಶ್ರವಣ ಶಕ್ತಿ ಕುಂದಿತ್ತೋ, ಅವರಿಗೆಲ್ಲ ಅದು

'ಯುರೇಕಾ' ಅನ್ನೋ ತರಹ ಕೇಳಿಸಿತಂತೆ. ಇವತ್ತಿಗೂ ಅವರೆಲ್ಲರೂ ಯುರೇಕಾ ಎನ್ನುತ್ತಿದ್ದ ಎಂದೇ ಹೇಳುತ್ತಿದ್ದಾರೆ.

ಆ ಮೊಮ್ಮಗನೇ ನಮ್ಮ ಕಥಾನಾಯಕನಾದ ಆರ್ಕಿಮಿಡೀಸ್ ಎಂಬುದು ನಿಮಗೀಗಾಗಲೇ ಗೊತ್ತಾಗಿರುತ್ತದೆ.

★★★

ನಮ್ಮ ಗೌಡರ ದ್ರಾಕ್ಷಿ ತೋಟ ಚೆನ್ನಾಗಿತ್ತು. ಫಸಲೂ ಚೆನ್ನಾಗಿ ಬರುವಂತೆ ಕಾಣುತ್ತಿತ್ತು. ಅದಕ್ಕೆ ಹಾಕಿಸಿದ ಚಪ್ಪರ ಸಾಕಷ್ಟು ಎತ್ತರ ಇದ್ದದ್ದರಿಂದ ಕಳ್ಳನರಿಗಳಿಗೆ ನಿರಾಸೆ ಮೂಡಿಸಿತ್ತು.

ಅಂತಹದರಲ್ಲೂ ಒಂದು ದಿನ ಎರಡು ನರಿಗಳು ಕಳ್ಳತನದಿಂದ ಒಳಗೆ ಪ್ರವೇಶ ಮಾಡಿಯೇಬಿಟ್ಟವು. ಮಧುರ ರಸದಿಂದ ತುಂಬಿ ತುಳುಕುವಂತೆ ಕಾಣುತ್ತಿದ್ದ ಗೊಂಚಲುಗಳನ್ನು ನೋಡುತ್ತ ಜೊಲ್ಲು ಸುರಿಸುವುದಕ್ಕೆ ಪ್ರಾರಂಭಿಸಿದವು.

ಗಂಡುನರಿ ಒಂದು ಸಾರಿ ನೆಗೆಯಿತು. ನಮ್ಮ ಭಾರತೀಯ ಕ್ರೀಡಾಪಟುಗಳಿಗೆ ಒಲಂಪಿಕ್ಸ್‌ನಲ್ಲಿ ಆಗುವ ತರಹವೇ ಇಲ್ಲಿಯೂ ಆಯಿತು. ಇನ್ನೇನು ಕೈಗೆ ಸಿಕ್ಕಿಯೇ ಬಿಟ್ಟಿತು ಎನ್ನುವಾಗ ಕೂದಲೆಳೆಯಷ್ಟು ಅಂತರದಲ್ಲಿ ತಪ್ಪಿಹೋಯಿತು. ಮೂರುನಾಲ್ಕು ಬಾರಿ ನೆಗೆದು ನೋಡಿತು. ಇನ್ನೂ ಹೆಚ್ಚು ಸಲ ಪ್ರಯತ್ನ ಮಾಡುವುದಕ್ಕೆ ಯಾವುದೇ ತರಹದ ನಿರ್ಬಂಧ ಇರಲಿಲ್ಲ. ಆದರೂ ಅದೇಕೋ ಗಂಡುನರಿ ಪ್ರಯತ್ನವನ್ನು ಬಿಟ್ಟುಕೊಟ್ಟಿತು.

''ಯಾಕ್ರೀ, ಪೆಟ್ರೋಲ್ ಖಲಾಸ್ ಆಯಿತಾ?''

ಗಂಡುನರಿ ಮೀಸೆ ಮಣ್ಣಾಗಿಲ್ಲವೆಂದು ಜಂಭ ಕೊಚ್ಚಿಕೊಳ್ಳುವ ಜಾಯಮಾನದ್ದು. ಅಷ್ಟು ಬೇಗನೆ ಸೋಲನ್ನು ಒಪ್ಪಿಕೊಂಡೀತೇ?

''ಇಲ್ಲ ಕಣೆ, ಹಾಗೇನಿಲ್ಲ. ಆದರೆ ತೀರ ಹತ್ತಿರ ಹೋದಾಗ ನನಗೆ ಬಂದ ವಾಸನೆಯ ಪ್ರಕಾರ ಆ ಹಣ್ಣುಗಳು ಬರಿಹುಳಿ, ಹುಳಿ ಎಂದರೆ ವಿಪರೀತ ಹುಳಿ''

''ಆದರೇನಾಯಿತು. ಅವನ್ನೇ ತರಬಹುದಿತ್ತಲ್ಲ!''

''ಅಂತಹ ಹುಳಿ, ಯಾರು ತಿನ್ನುತ್ತಾರೆ. ನೀನು ತಿನ್ನುತ್ತಿದ್ದೆಯಾ?''

''ಹೌದು, ನನಗೆ ಅದೇ ಹೆಚ್ಚು ಇಷ್ಟ''

''ಹೌದೇನೆ? ನಿಜವಾಗಲೂ ಹೌದಾ?!''

''ಹೌದು.''

ಅದನ್ನು ಕೇಳಿದ ಗಂಡುನರಿ 'ಯಾಹೂ' ಎನ್ನುತ್ತ ಇಮ್ಮಡಿ ಹುರುಪಿನಿಂದ ಮತ್ತೊಮ್ಮೆ ನೆಗೆಯಿತು. ಗೊಂಚಲು ಎಟುಕಿತು. ದೊಡ್ಡಗೊಂಚಲನ್ನೇ ಹರಿದುಕೊಂಡು ಬಂದಿತು. ಹೆಣ್ಣುನರಿ ಒಂದೊಂದಾಗಿ ಎಲ್ಲವನ್ನೂ ತಿಂದು ಮುಗಿಸಿತು. ಗಂಡುನರಿ ತೃಪ್ತಿಯಿಂದ ನೋಡುತ್ತ ಕುಳಿತಿತ್ತು.

ಮೊದಲಬಾರಿಗೆ ತಂದೆಯಾಗಲಿರುವ ಥ್ರಿಲ್ ಅನುಭವಿಸಿದವರಿಗೇ ಗೊತ್ತು. ಆ ಥ್ರಿಲ್ಲಿಂಗ್ ಸಮಾಚಾರವೇ ಅದಕ್ಕೆ ಇಮ್ಮಡಿ ಶಕ್ತಿಯಿಂದ ನೆಗೆಯುವುದಕ್ಕೆ ಅಗತ್ಯವಿದ್ದ ಪ್ರೇರಣೆ ನೀಡಿತ್ತು.

ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ನಮ್ಮ ಭಾರತೀಯ ಕ್ರೀಡಾಪಟುಗಳ ಕೋಚ್‌ಗಳಿಗೆ ಈ ಗುಟ್ಟು ಗೊತ್ತಾಗಿದ್ದಿದ್ದರೆ ಚಿನ್ನದ ಪದಕಗಳನ್ನು ಮನಬಂದಂತೆ ಬಾಚಿಕೊಳ್ಳಬಹುದಿತ್ತು. ಆದರೆ ಅದು ಸಾಧ್ಯವೇ? ಈಗಾಗಲೇ ಜನಸಂಖ್ಯೆ ನೂರು ಕೋಟಿ ದಾಟಿದೆ.!!

★★★

ಒಂದು ಕಾಡಿನಲ್ಲಿ ಒಂದು ಮೊಲ ಒಂದು ಆಮೆ ಇದ್ದವು. ಹಾಗೆ ಇನ್ನೂ ಅನೇಕ ಆಮೆಗಳೂ ಇನ್ನೂ ಅನೇಕ ಮೊಲಗಳೂ ಇದ್ದವು. ಆದರೆ ಇವೆರಡರ ಕತೆ ಸ್ವಲ್ಪ ಭಿನ್ನ. ಪರಸ್ಪರ ಭೇಟಿಯಾದಾಗಲೆಲ್ಲ ಇವೆರಡೂ ತಮ್ಮ ತಮ್ಮ ಹೆಮ್ಮೆಯನ್ನು ಹೇಳಿಕೊಳ್ಳುವುದರಲ್ಲಿಯೇ ನಿರತವಾಗಿರುತ್ತಿದ್ದವೆಂಬುದು ಒಂದು ವಿಶೇಷ. ತಮ್ಮ ಕುಟುಂಬದ ಬಗ್ಗೆ ತಮ್ಮ ಯೋಗ್ಯತೆಯ ಬಗ್ಗೆ ಇದ್ದದ್ದೂ ಇಲ್ಲದ್ದೂ ಸೇರಿಸಿಕೊಂಡು ಜಂಭ ಕೊಚ್ಚಿಕೊಳ್ಳುವುದೆಂದರೆ ಇವೆರಡಕ್ಕೂ ಅದೇನು ಸಂತೋಷವೋ ಏನೋ!

''ನಾನು ನೀರಿನಲ್ಲಿಯೂ ಈಜಬಲ್ಲೆ, ನೆಲದಮೇಲೂ ನಡೆಯಬಲ್ಲೆ ಗೊತ್ತಾ?''

''ಆದರೇನು? ನಾನು ನೆಲದಮೇಲೆ ಓಡಬಲ್ಲೆ, ಮರದಮೇಲೂ ಏರಬಲ್ಲೆ. ಅದರಲ್ಲಿ 'ನನ್ನ ನೀನು ಗೆಲ್ಲಲಾರೆ..''' ಎಂದು ಹಾಡುತ್ತ, ಮೀಸೆಯ ಮೇಲೆ ಕೈಹಾಕಿಕೊಳ್ಳುತ್ತ ಹೇಳಿತು ಮೊಲ.

ಇದನ್ನು ಕೇಳಿದ ಆಮೆಗೆ ಸ್ವಲ್ಪ ಇರುಸುಮುರುಸಾಯಿತು. ಮೊಲಕ್ಕೆ ಮೀಸೆ ಇದ್ದವು. ಆಮೆಗೆ ಈ ರೀತಿ ಕೈ ಹಾಕಿಕೊಳ್ಳುವುದಕ್ಕೆ ಮೀಸೆಯೇ ಇರಲಿಲ್ಲವೆಂಬುದು ದೊಡ್ಡ ಹಿನ್ನಡೆ ಎನಿಸಿತು. ಆದರೂ ಸಾವರಿಸಿಕೊಂಡು

''ಅದೇನು ಮಹಾ, ಮನಸ್ಸು ಮಾಡಿದರೆ ನಾನು ಕೂಡ ವೇಗವಾಗಿ ಓಡಬಲ್ಲೆ, ನಿನ್ನನ್ನು ಮೀರಿಸಬಲ್ಲೆ'' ಎಂದು ಹೇಳಿತು.

''ಎಲ್ಲಿ ಓಡಿ ತೋರಿಸು'' ಎಂದು ಮೊಲ ಕೇಳಿತು.

''ನಾನು ಮನಸ್ಸು ಮಾಡಿದರೆ ಎಂದು ಹೇಳಿದೆನಲ್ಲ, ನಾನೀಗ ಮನಸ್ಸು ಮಾಡಿಲ್ಲ.''

''ಮತ್ತೆ ಯಾವಾಗ ಮಾಡುವಿ?''

''ಅದು ನನ್ನ ಮನಸ್ಸು''.

''ಸರಿ, ಹಾಗಾದರೆ ಬರುವ ಭಾನುವಾರ ಇಲ್ಲಿಂದ ದೂರದಲ್ಲಿ ಆ ಕಲ್ಲು ಬಂಡೆಯ ಇದೆಯಲ್ಲ ಅದರ ಬುಡದವರೆಗೆ ಓಡುವ ಪಂದ್ಯವನ್ನು ಇಟ್ಟುಕೊಳ್ಳೋಣ. ಅದರಲ್ಲಿ ನೀನು ಜಯಿಸಿದರೆ ನಿನ್ನ ಮಾತು ನಿಜವೆಂದು ನಮ್ಮ ಕುಟುಂಬದವರೆಲ್ಲ ಒಪ್ಪಿಕೊಳ್ಳುತ್ತೇವೆ.''

ಕುಟುಂಬದ ಪ್ರತಿಷ್ಠೆಯ ಪ್ರಶ್ನೆ ಬಂದದ್ದರಿಂದ ಆಮೆ ಒಪ್ಪಿಕೊಳ್ಳಲೇ ಬೇಕಾಯಿತು. ಆದರೂ ಸ್ವಲ್ಪ ಹೆದರಿಸಿ ನೋಡೋಣವೆಂದು, ''ಅದರಲ್ಲಿ ಜಯ ಗಳಿಸುವುದು ನಾನೇ! ನೋಡುತ್ತಿರು. ನನಗೆ ಸಲಹೆ ಕೊಡಲಿಕ್ಕೆ ನಮ್ಮ ಮನೆಯಲ್ಲಿ ನಮ್ಮ ತಾತನಿದ್ದಾನೆ. ಅವನು ಅತಿಬುದ್ಧಿಶಾಲಿ, ಚಾಣಕ್ಯನ ತರಹ'' ಎಂದು ಹೇಳಿ ನೋಡಿತು.

ಮೊಲವು ಸುಲಭದಲ್ಲಿ ಬಿಟ್ಟುಕೊಡುವ ಜಾಯಮಾನದ್ದಾಗಿರಲಿಲ್ಲವಲ್ಲ.

''ನನ್ನ ಮನೆಯಲ್ಲಿಯೂ ನನ್ನ ತಾತ ಇದ್ದಾನೆ! ಅವನೂ ಅಷ್ಟೇ ಬುದ್ಧಿಶಾಲಿ. ಅವನೂ ಒಳ್ಳೆಯ ಸಲಹೆ ಕೊಡುತ್ತಾನೆ'' ಎಂದು ಮೊಲ ಹೇಳುವುದರೊಂದಿಗೆ ಅಂದಿನ ಮೀಟಿಂಗು ಕೊನೆಗೊಂಡಿತು.

ಪರಸ್ಪರ ತಾತಂದಿರ ಹತ್ತಿರ ತಮ್ಮ ಕತೆಯನ್ನು ಹೇಳಿಕೊಂಡವು.

ಸಮಸ್ಯೆ ಈಗ ತಾತಂದಿರ ತಲೆಗಳಿಗೆ ಸ್ಥಳಾಂತರಗೊಂಡಂತಾಯಿತು. ಅವೆರಡೂ ತಮ್ಮ ತಮ್ಮ ಧಾಟಿಯಲ್ಲಿ ಯೋಚನೆ ಮಾಡುತ್ತ ಮಲಗಿಕೊಂಡವು.

ಮಾರನೆಯ ದಿನ ಸಾಯಂಕಾಲ ಹಿರಿಯರ ಕ್ಲಬ್ಬಿನಲ್ಲಿ ಈ ತಾತಂದಿರ ಭೇಟಿಯಾಯಿತು. ಬಿಸಿರಕ್ತದ ಯುವ ಪೀಳಿಗೆಯ ಬಗೆಗೆ ಸ್ವಲ್ಪಹೊತ್ತು ಇಬ್ಬರೂ ಗುಣಗಾನ ನಡೆಸಿದರು. 'ಅವರು ತಾವೇ ಏನಾದರೂ ಮಾಡಿಕೊಂಡು ಬಿಡುತ್ತಾರೆ. ಆ ಬಳಿಕ ಬಂದು ತಮ್ಮ ಹಿರಿಯರನ್ನೂ ಹೀಗೆ ಗೋಳಿಗೆ ಹಾಕುತ್ತಾರೆ' ಎನ್ನುವ ಕೆಲವು ಕತೆಗಳ ಪುನರುಚ್ಚಾರ ನಡೆಯಿತು. ಮೆಲ್ಲಗೆ ಇಂದಿನ ಕತೆಯ ಪ್ರಸ್ತಾಪಕ್ಕೂ ಬಂದ ಮೊಲ ತಾತಯ್ಯ!

''ಅಲ್ಲ, ಅದು ಯಾವ ಧೈರ್ಯದ ಮೇಲೆ ಪಂದ್ಯ ಕಟ್ಟಿದ್ದಾನೆ ನಿಮ್ಮ ಮೊಮ್ಮಗ?'' ಎಂದು ಕೇಳಿಯೇ ಬಿಟ್ಟ.

ಆಮೆ ತಾತಯ್ಯ ತುಂಬಾ ಶಾಂತವಾಗಿಯೇ ಇದ್ದ. ಮೆಲ್ಲನೆಯ ದನಿಯಲ್ಲಿ ಹೇಳಿದ ''ಉದ್ದೀಪನಾ ಡ್ರಗ್ ಬಗ್ಗೆ ನೀವು ಕೇಳಿದ್ದೀರಾ?''

''ಹೌದು. ಅದೇನೋ ಮೊನ್ನೆ ಒಲಿಂಪಿಕ್ಸ್‌ನಲ್ಲಿ ಒಂದು ದೊಡ್ಡ ಹಗರಣವೇ ಅಗಿಹೋಯಿತಲ್ಲ!''

''ಅದೇ! ಅದನ್ನೇ ಇವನು ನೆಚ್ಚಿಕೊಂಡಿರುವುದು! ಅದನ್ನು ಹೇಗೋ ಸಂಪಾದಿಸಿ ತಂದುಕೊಂಡಿದ್ದಾನೆ.''

ಇಲ್ಲಿಯವರೆಗೆ ಇದ್ದ ಮೊಲ ತಾತಯ್ಯನ ಧೈರ್ಯ ಈಗ ಅಲುಗಾಡ ತೊಡಗಿತು. ಡ್ರಗ್‌ನ ಕಾರ್ಯಕ್ಷಮತೆಯ ಬಗೆಗೆ ಸರಿಯಾದ ಮಾಹಿತಿ ಇಲ್ಲ. ಒಂದು ವೇಳೆ ಆಮೆ ಗೆದ್ದು ತನ್ನ ಮೊಮ್ಮಗನಿಗೆ ಸೋಲುಂಟಾದರೆ ಎಂಬ ಭೀತಿ ತಲೆದೋರಿತು.

''ಅಯ್ಯೋ, ಪಂದ್ಯದಲ್ಲಿ ನಿಮ್ಮ ಮೊಮ್ಮಗ ಸೋತರೆ ಯಾರಿಗೂ ಆಶ್ಚರ್ಯವಾಗುವುದಿಲ್ಲ. ಆದರೆ ನನ್ನ ಮೊಮ್ಮಗ ಸೋತರೆ ಎಲ್ಲರೂ ನಮ್ಮ ಕುಟುಂಬವನ್ನು ಸಿಕ್ಕಾಪಟ್ಟೆ ಹೀಯಾಳಿಸತೊಡಗುತ್ತಾರೆ. ಇದಕ್ಕೆ ನೀವೇ ಏನಾದರೂ ಪರಿಹಾರ ಸೂಚಿಸುತ್ತೀರಾ''? ಎಂದು ಕೇಳಿಕೊಂಡ ಮೊಲ ತಾತಯ್ಯ.

''ಅಂದರೆ, ನಿಮ್ಮ ಮೊಮ್ಮಗನಿಗೂ ಆ ಡ್ರಗ್ ಒದಗಿಸಬೇಕು ಅಂತೀರಾ! ಅದನ್ನು ಹೇಗಾದರೂ ಮಾಡಿ ನಾನೇ ತಂದು ಕೊಡಬೇಕೂ ಅಂತಾನೆ ನಿಮ್ಮ ಅಂಬೋಣ ಅಲ್ಲವೇ?''

ಮೊಲ ತಾತಯ್ಯ ತಲೆಯಾಡಿಸಿದ

''ಕರ್ಣನ ಹತ್ತಿರ ಇಂದ್ರನೇ ಬ್ರಾಹ್ಮಣನ ವೇಷದಲ್ಲಿ ಬಂದು ಅಮೃತ ಕಲಶ ಬೇಡಿದ ಕತೆಯನ್ನು ಜ್ಞಾಪಿಸುತ್ತಿದ್ದೀರಿ. ಆಗಲಿ, ನಾವೂ ಅದೇ ಪುಣ್ಯಭೂಮಿಯಲ್ಲಿ ಜನಿಸಿದವರಲ್ಲವೇ! ಏನಾದರೂ ಮಾಡೋಣ'' ಮರುದಿನ ಆಮೆ ತಾತಯ್ಯ ಮೊಲ ತಾತಯ್ಯನಿಗೆ ಮದ್ದು ತಂದು ಕೊಟ್ಟ.

''ಇದನ್ನು ಪಂದ್ಯದ ಪ್ರಾರಂಭಕ್ಕಿಂತ ಐದು ನಿಮಿಷ ಮುಂಚೆ ಸೇವಿಸುತ್ತಾರೆ'' ಎಂದು ಹೇಳಿದ. ಕತೆಯ ಮುಂದಿನ ಭಾಗ ನಿಮಗೆ ಈಗಾಗಲೆ ಗೊತ್ತಿದೆ. ಮೊಲ ನಡುಹಾದಿಯಲ್ಲಿ ನಿದ್ದೆ ಮಾಡಿತು.

ಆಮೆ ಜಯ ಗಳಿಸಿತು!! ನೆರೆದ ಕೂಟವೆಲ್ಲ ಆಮೆಯ ಹೆಸರಿನಲ್ಲಿ ಜಯಜಯಕಾರ ಮಾಡಿತು.

ಮೊಲ ತಾತಯ್ಯನಿಗೆ ಈಗ ಆಮೆ ತಾತಯ್ಯನ ಮಾಡಿದ ಚಾಣಕ್ಯ ತಂತ್ರ ಏನೆಂದು ಅರ್ಥವಾಯಿತು. ಆದರೆ ಅದರಲ್ಲಿ ಅಡಗಿರುವುದು ಮದ್ದಿನ ವಿಷಯ. ಅದನ್ನು ಬಹಿರಂಗವಾಗಿ ಯಾರೆದುರೂ ಬಾಯಿ ಬಿಡುವ ಹಾಗಿಲ್ಲ ಬೇರೆ!!

(ಆಮೆ ತಾತಯ್ಯ ಉದ್ದೀಪನಾ ಮದ್ದು ಎಂದು ನಿದ್ದೀಪನಾ ಮದ್ದನ್ನು ಕೊಟ್ಟು ತನ್ನ ಕಾರ್ಯವನ್ನು ಸಾಧಿಸಿಕೊಂಡಿದ್ದ)

ನಿಮಗೇ ಗೊತ್ತಲ್ಲ ಆಮೆ ತಾತಯ್ಯನಿಗೆ ಪ್ರಾಯ ನೂರ ಹನ್ನೆರಡು ವರುಷ; ಮೊಲ ತಾತಯ್ಯನಿಗೆ ಕೇವಲ ನಾಲ್ಕೂವರೆ ವರುಷ. ಇಬ್ಬರಿಗೂ 'ತಾತಯ್ಯ' ಎಂಬ ಪಟ್ಟ ಇರುವುದೇನೋ ಸರಿ. ಆದರೆ ಬರಿ ಪಟ್ಟ ಮಾತ್ರ ಇದ್ದರೆ ಸಾಕೇ? ನೂರ ಹನ್ನೆರಡು ವರುಷದ ಅನುಭವವೆಲ್ಲಿ, ನಾಲ್ಕೂವರೆ ವರುಷದ ಅನುಭವವೆಲ್ಲಿ!!

***ನೀತಿ: 'ಪಟ್ಟ', 'ಪದವಿ' ದೊರಕಿದ ಮಾತ್ರಕ್ಕೆ ಯೋಗ್ಯತೆಯೂ ತನ್ನಷ್ಟಕ್ಕೆ ಬಂದು ಬಿಡುತ್ತದೆ ಎಂದು ಭಾವಿಸಿಕೊಳ್ಳುವುದು ಮಹಾ ದೊಡ್ಡ ಮೂರ್ಖತನ.***

✵

---

ಅವನು ಅಂದು ಹೇಳಿದ್ದು
ಮೂಜಗದಲ್ಲೂ ನಿನ್ನಂಥ ಹೆಣ್ಣಿಲ್ಲ
– ಸೌಂದರ್ಯದಲ್ಲಿ
ಅವನು ಇಂದು ಹೇಳುತ್ತಿರುವುದು
ಮೂಜಗದಲ್ಲೂ ನಿನ್ನಂಥ ಹೆಣ್ಣಿಲ್ಲ
– ಜಗಳಗಂಟಿತನದಲ್ಲಿ

- ಸುಜಾತಾ

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಳ

- ಕನ್ನಡವು ಇಡಿ ಇಡಿಯಾಗಿ ಪ್ರಾಥಮಿಕದಲ್ಲೇ ಸೆಕಂಡರಿ ಆಗುತ್ತಿದೆಯೆ?
- ನಿಮ್ಮ ತಂದೆ ಏನು ಮಾಡ್ತಾರೆ ಎಂದು ಮೇಡಂ ಹುಡುಗನ್ನ ಕೇಳಿದರೆ ಅವನು ನಮ್ಮ ತಾಯಿ ಹೇಳಿದ್ದೆಲ್ಲಾ ಮಾಡ್ತಾರೆ ಎಂದು ಹೇಳುವುದೆ?
- 'ನಾನು ಏನು ಹೇಳಬೇಕು ಅಂತೀನಿ...' ಎಂದು ಶುರು ಮಾಡುವವರು ಹೇಳಿದ್ದು ಕೇಳಿದ ಮೇಲೆ ಅವರು ಅದು ಹೇಳದೆ ಇದ್ದಿದ್ದರೂ ಆಗಿತ್ತು ಎಂದು ಅನೇಕ ವೇಳೆ ಅನಿಸುತ್ತದೆ ಅಲ್ಲವೆ?
- It takes 8460 bolts to assemble an automobile and one nut to scatter them all over the road.
- ಕಾಮನ ಬಿಲ್ಲನ್ನು ನೋಡಬೇಕೆಂದರೆ ಮಳೆಯನ್ನು ಸಹಿಸಿಕೊಳ್ಳಲೇಬೇಕು.
- ಶೇ 90ರಷ್ಟು ರಾಜಕಾರಣಿಗಳು ಉಳಿದವರಿಗೆ ಕೆಟ್ಟ ಹೆಸರು ತರುತ್ತಾರೆ ಎಂದು ಕಿಸಿಂಜರ್ ಹೇಳಿದ್ದು ನಮ್ಮ ಶಾಸಕರ ಬಗ್ಗೆಯೇ ಇರಬಹುದು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಕುಡಿತ ಕಡಿಮೆ ಮಾಡುವ ಉಪಾಯ
  ಮದುವೆಗೆ ಮುಂಚೆ – ದುಃಖದಲ್ಲಿದ್ದಾಗ ಮಾತ್ರ ಕುಡಿಯಿರಿ
  ಮದುವೆಯ ನಂತರ – ಖುಷಿಯಾಗಿದ್ದಾಗ ಮಾತ್ರ ಕುಡಿಯಿರಿ
- 'ಹೊರಗೆ' ಎಂದು ಬರೆದಿರುವ ದಾರಿ ಇನ್ನೊಂದೆಡೆಗೆ ಪ್ರವೇಶವೂ ಆಗಿರಬಹುದು.
- Some people make things happen; some watch things happen; while others wonder what has happened.
- ಶಿಕ್ಷಕ ಕೆಲಸ ಸುಲಭವಾಗಿ ಸಿಗಬಹುದು; ಆದರೆ ಉತ್ತಮ ಶಿಕ್ಷಕನಾಗುವುದು ಸುಲಭವಲ್ಲ.
- ಮೋಸ ಮಾಡಲು ಅವಕಾಶ ಸಿಗದಿದ್ದರೆ ಎಲ್ಲರೂ ಪ್ರಾಮಾಣಿಕರಾಗಿಯೇ ಉಳಿಯುತ್ತಾರೆ.
- ಪಾಶ್ಚಿಮಾತ್ಯೀಕರಣಕ್ಕೊಳಗಾಗದೆ ಆಧುನೀಕರಣಗೊಳ್ಳುವುದು ಹೇಗೇ ಎಂಬುದೇ ನಮ್ಮ ಸಮಸ್ಯೆ.
- You go up the day you have your first real laugh - at yourself.
- ಯಶಸ್ವಿ ವ್ಯಕ್ತಿಯೊಬ್ಬ ಬೊಜ್ಜು ಬೆಳೆಸಿದ್ದರೆ ಅವನಿಗೆ ಹೀಗೆ ಹೇಳಬಹುದು: ನಿನ್ನ ಯಶಸ್ಸು ಹೊಟ್ಟೆಗೆ ಹೋಗಿದೆ, ತಲೆಗೆ ಅಲ್ಲ.
- ನಮ್ಮ ರಾಜಕಾರಣಿಗಳಿಗೆ ಕೊರತೆ ಇರುವುದು ಹೊಸ ಹೊಸ ಐಡಿಯಾಗಳು ಪೆಟ್ರೋಲ್ ಅಲ್ಲ, ಆದುದರಿಂದಲೇ ಯಾತ್ರೆಗಳು ನಡೆಯುತ್ತಿವೆ.
- Everybody is good alone. Together something goes wrong.

*

# ಕೆಲಸವಿದ್ದ ಬಡಗಿ ಪೈನ್ ಮರ ಬೋಳಿಸಿದ್ದು

**- ವಾಣೀ ಸುರೇಶ್**

**ಆ**ದಿನ್ನೆಷ್ಟು ವಿಶಾಲವಾದ ಹುಲ್ಲಿನ ಮೈದಾನ ಅಂತೀರಿ? ಎಲ್ಲೆಲ್ಲೂ ಹಸಿರು. ಅಲ್ಲೇ ಎಲ್ಲರೂ ನಮ್ಮ ಪಾದರಕ್ಷೆಗಳನ್ನು ಕಳಚಬೇಕಿತ್ತು. ಬರಿಗಾಲಲ್ಲಿ ಮೆತ್ತನೆಯ ಹುಲ್ಲಿನ ಮೇಲೆ ಸಾಕಷ್ಟು ನಡೆದ ಮೇಲೆ ರೆಡ್ ಕಾರ್ಪೆಟ್ ಹಾಸಿದ್ದ ಕವಲುದಾರಿಗಳ ಒಂದು ಇಂಟರ್ ಸೆಕ್ಷನ್ನು. ಅಲ್ಲಿ ನಿಂತಿದ್ದ ಸೀರೆಯುಟ್ಟ ನಮ್ಮ ಹಸನ್ಮುಖಿ ಯುವತಿಯರು ನಮಗೆಲ್ಲಾ ಒಂದೊಂದು ಮಲ್ಲಿಗೆ ದಂಡೆ ಕೊಟ್ಟು, ಯಾವುದಾದರೊಂದು ರೆಡ್ ಕಾರ್ಪೆಟ್ ಕವಲಿನ ಕಡೆ ಹೋಗಕ್ಕೆ ನಿರ್ದೇಶಿಸ್ತಿದ್ರು. ಹತ್ತಿರದಿಂದ ನೋಡಿದರೆ ಅದು ಕಾರ್ಪೆಟ್ ಆಗಿರ್ಲೇ ಇಲ್ಲ! ಅದು ಕೆಂಪು ಗುಲಾಬಿ ದಳಗಳ ಹಾಸಾಗಿತ್ತು. ಓ ತಡೀರಿ ಸ್ವಲ್ಪ, ಅದು ಗುಲಾಬೀನೂ ಅಲ್ಲ, ಗುಲ್ ಮೊಹರ್ ಹೂಗಳ ಕೆಂಪು, ಬಿಳಿ ಚುಕ್ಕೆಯ ದಳಗಳು! ಅಲ್ಲೇ ಕೊನೇಲಿದ್ದ ಸ್ಟೇಜ್ ಮೇಲಿಂದ ವೀಣೆಯ ಝೇಂಕಾರ ಮೃದುವಾದ ಕೊಳಲಿನ ನಾದದ ಜೊತೆಯಲ್ಲಿ! ನುಡಿಸೋರ ಮುಖ ಮಾತ್ರ ಅಸ್ಪಷ್ಟ. ಇದೇನು ಸುಪರಿಚಿತ ಘಮ, ಮಲ್ಲಿಗೆಯ ವಾಸನೇನ್ನೂ ಮೀರಿಸಿ ಬರ್ತಿರೋದು? ಅಯ್ಯೋ ಇದೇನಿದು? ಎಲ್ಲರ ಕೈಯಲ್ಲೂ ಒಂದೊಂದು ಬೆಣ್ಣೆ ಮಸಾಲೆಯ ತಟ್ಟೆ! ಚಟ್ನಿಯ ಪಕ್ಕದಲ್ಲಿ ಮದ್ದೂರು ವಡೆ ಬೇರೆ!!

ಇದ್ದಕ್ಕಿದ್ದಾಗೆ ಅದ್ಯಾವ ಸೀಮೆ ನೂಕುನುಗ್ಗಲು ಶುರುವಾಯ್ತಂತ! ಎಲ್ಲಾ ಮಾಯವಾಗಿ, ಕಂಡಲ್ಲೆಲ್ಲಾ ಬರೀ ಬಿಳೀ ಟೋಪಿಗಳು, ಆಟೋರಿಕ್ಷಾಗಳು, ಬಸ್ಸುಗಳು, ಕಾರು ಸ್ಕೂಟರುಗಳು – ಅವುಗಳ ಹಾರನ್ನು, ಹೊಗೆ, ಸೀಟಿ ಹೊಡೀತಿರೋ ಪೋಲೀಸಿನೋರು, ಪಾನೀ ಪೂರಿ ಅಂಗಡಿಗಳು, 'ಅಕ್ಕಾ, ಪನ್ನೇರಳೆ ಹಣ್ಣು ತೊಗೊಳ್ಳಿ, ಮೂರಕ್ಕೆ ಬರೀ ನೂರೇ ರೂಪಾಯಿ' – ಅಂತೆಲ್ಲಾ ಕೂಗಾಟ. ಅಷ್ಟೊತ್ತಿಗೆ ಸರ್ಯಾಗಿ ಯಾವ್ದೋ ಬೋರ್‌ವೆಲ್ ರಿಗ್ ಬೇರೆ ಹೊಡ್ಕೊಳ್ಳಕ್ಕೆ ಶುರು. ಒಂದು ಆಟೋರಿಕ್ಷಾ ಅಂತೂ ತೀರಾ ನನ್ನ ಮೈಮೇಲೆ ರಭಸವಾಗಿ ಬರಬೇಕೇ! ಅಯ್ಯಯ್ಯೋ ಸತ್ತೆ ಅಂತ ಕಿರಿಚಿದೆ.

''ರುಚಿಯಾಗಿತ್ತೂಂತ ಯಾರಾದ್ರೂ ಹಾಗೆ ಮೂರ್ಮೂರು ಸಲ ಬಿಸಿಬೇಳೆಬಾತ್-ಚಿಪ್ಸ ಗದುಕಿಕೋತಾರ್ಯೇ, ಅದ್ರಲ್ಲೂ ರಾತ್ರೀ ಹೊತ್ತು? ಎದ್ದೇಳು ಸಾಕು ಎಂಟು ಘಂಟೆ ಆಯ್ತು'' – ಅಂತ ಕುಹಕವಾಡಿದ್ರು ಪಕ್ಕದ ಕುರ್ಚೀಲಿ ಕೂತು ಇಂಟರ್ನೆಟ್ ನೋಡ್ತಿದ್ದ ಪತಿದೇವರು.

ಹಿಂದಿನ ದಿನ, ಸ್ನೇಹಿತರ ಮನೆಯ ನಮ್ಮ ಬೀಳ್ಕೊಡುಗೆಯ ಪಾರ್ಟಿಯಲ್ಲಿ ಸ್ವಲ್ಪ ಹೆಚ್ಚಾಗೇ ಬಡಿಸಿಕೊಂಡಿದ್ದನ್ನ ಇವರು ಗಮನಿಸಿದ್ದರ ಬಗ್ಗೆ ಮನಸ್ಸು ಉಳುಕಿದ್ರೂ, ನನ್ನ ಗಮನ ಹರಿದಿದ್ದು ಮಾತ್ರ ಆ ನಿಶ್ಯಬ್ಧದ ವಾತಾವರಣದಲ್ಲಿ ಅಸಹಜವಾಗಿ ಕೇಳಿಸ್ತಿದ್ದ ಆ ಒಂದು ನಮೂನೆಯ ಸದ್ದಿನ ಕಡೆಗೆ, ಕಾಡು ಮಲ್ಲೇಶ್ವರ ದೇವಸ್ಥಾನದ up-ನಲ್ಲಿ ಎಂಟ್ಹತ್ತು ಆಟೋರಿಕ್ಷಾಗಳು ಒಟ್ಟಿಗೆ ಅರ್ಜೆಂಟಾಗಿ ಹೋಗ್ತಿರುವಾಗ ಅಲ್ಲೇ ಪಕ್ಕದಲ್ಲಿರೋರು ಯಾರೋ ಬೋರ್‌ವೆಲ್ ತೊಡಿಸ್ತಿದ್ರೆ ಹೇಗಿರತ್ತೆ, ಹಾಗೆ! ಅಥವಾ ಏನಾದ್ರೂ ಇಲ್ಲೇ ಪಕ್ಕದ

ಮನೆಯೋರು ಯಾರಾದ್ರೂ ಫ್ಲೋರ್ ಪಾಲಿಶ್ ಮಾಡ್ತಿರಬಹುದೇ? ಆದ್ರೆ ಇಲ್ಲೆಲ್ಲಿ ಫ್ಲೋರಿಂಗು ಈ ದೇಶದ ಕಾರ್ಪೆಟ್ ಹಾವಳೀಲಿ, ಸದ್ಯ! ಇನ್ನೂ ಕಳೆಯದಿದ್ದ ಸವಿನಿದ್ದೆಯ ಗುಂಗಿನಲ್ಲೇ ಕಿಟಕಿಯಾಚೆ ಕಣ್ಣಾಡಿಸ್ದೆ. ಸೊಂಟಕ್ಕೆ ಹಗ್ಗ ಕಟ್ಟಿಕೊಂಡಿದ್ದ ಯಾರೋ ಒಬ್ಬನ ಕೈಯ್ಯಲ್ಲಿದ್ದಿದ್ದ ಪವರ್ ಸಾ ಪಕ್ಕದ ಮನೆಯ ಎಪ್ಪತ್ತು-ಎಂಭತ್ತು ವರ್ಷದ ಪೈನ್ ಟ್ರೀಯ ಚರಮಗೀತೆಯೇನೋ ಅನ್ನೋ ಹಾಗೆ ಕರ್ಕಶವಾಗಿ ಅರಚಿಕೊಳ್ತಿತ್ತು. ಆ ನರಪೇತಲ, ಭೀಮಗಾತ್ರದ ಆ ಮರದ ಕೊಂಬೆಗಳನ್ನ ಮುಲಾಜಿಲ್ಲದೆ ಕತ್ತರಿಸಿ ಕೆಡವ್ತಿದ್ದ.

ಹಿಮ ಸುರಿಯುವಾಗ, ಸುತ್ತೆಲ್ಲಾ ಹರಡಿರುತ್ತಿದ್ದ ಎರಡಡಿ ಸ್ನೋ ಮಧ್ಯೆ, ಕಂಕಿಂ ಅನ್ನದೇ ಬೆಣ್ಣೆಯಂಥಹ ಸ್ನೋವನ್ನು ಟನ್ನುಗಟ್ಟಲೆ ತನ್ನ ಕೊಂಬೆಗಳಲ್ಲಿ ಕೊನೇ ಪಕ್ಷ ಐದಾರು ತಿಂಗಳಾದ್ರೂ ಹೊತ್ತು ಮೆರೆಯುತ್ತಿದ್ದ ರಾಜಗಾಂಭೀರ್ಯದ ಮರ ಅದು! ಹ್ಯಾರಲ್ಡ್ ಚಿಕ್ಕ ಹುಡುಗನಾದಾಗ ಅವನ ಹುಟ್ಟಿದ ಹಬ್ಬದ ದಿನ ನೆಟ್ಟಿದ್ದು ಅಂತ ಹೆಮ್ಮೆಯಿಂದ ಹೇಳಿಕೊಂಡಿದ್ದು ಕೇಳಿದ್ದೀನಿ. ಅದಿದ್ದಿದ್ದು ನಮ್ಮ ಮನೆಯ ಫೆನ್ಸ್ ಕಡೆಯಾದ್ರಿಂದ ಮರದಿಂದ ಉದುರುವ ಅಸಂಖ್ಯ ಕೋನುಗಳು, ಶಿಶಿರದಲ್ಲಿ ಅದು ಸುರಿಸುವ ಮೊನಚಾದ 'ಸೂಜಿಗಳು', ಸುರಿಯುವ ಮಳೆಯಲ್ಲೂ ಅದರ ನೆರಳಲ್ಲಿ ನಿಂತವರನ್ನು ನೆನೆಯಕ್ಕೆ ಬಿಡದ ಅದರ ಔದಾರ್ಯ - ಆಫ್ ಕೋರ್ಸ್, ಇವೆಲ್ಲದರ ಹೆಚ್ಚಿನ ಫಲಾನುಭವಿಗಳು ನಾವೇ. ಇದೆಲ್ಲಾ ಒಂದು ಸೆಕೆಂಡಿನಲ್ಲಿ ಮನಸ್ಸಿನಲ್ಲಿ ಮಿಂಚಿ ಮಾಯವಾಯ್ತು.

ನಾಲ್ಕೈದು ಹೆಲ್ಮೆಟ್-ಧಾರಿಗಳು ಮರ ಕಡಿಯುವುದನ್ನು ನಿಭಾಯಿಸ್ತಿದ್ರೂಂತನ್ನಿಸ್ತು. ಮರದಿಂದ ಸುಮಾರು ಒಂದು ಮೂವತ್ತಡಿಗಳ ಅಂತರದಲ್ಲಿ ಒಂದು ಮಹಾಕಾಯದ ಟ್ರೈಲರ್ ಟ್ರಕ್ ನಿಂತಿತ್ತು. ಅದರ ಹಿಂಭಾಗದಲ್ಲಿ ನಾವು ಕಂಡರಿಯದ 'ಮಲ್ಚರ್' ಎಂಬ ಬೃಹತ್ ಚಕ್ರವುಳ್ಳ ಯಂತ್ರ. ದಿಮ್ಮಿಗಳನ್ನು, ಮರದ ರೆಂಬೆಗಳನ್ನು ತುಂಬಿಸಿಕೊಳ್ಳಕ್ಕೋ ಏನೋ ಮಲ್ಚರ್ ಮತ್ತು ಟ್ರೈಲರ್ ಟ್ರಕ್ ನಡುವೆ ಸುಮಾರು ದೊಡ್ಡದಾದ ಇನ್ನೊಂದು ಖಾಲಿ ಟ್ರಕ್ಕು ನಿಂತಿತ್ತು. ಒಂದು ಪುಟ್ಟ Fork Lift-ಉ, ಮರ ಮತ್ತು ಅಸಾಧ್ಯ ಶಬ್ಧ ಮಾಡ್ತಿದ್ದ ಮಲ್ಚರಿನ ನಡುವೆ ತಾರಾಡ್ತಿತ್ತು. ಮಿಲಿಟರಿ ಆಪರೇಷನ್ನೊಂದನ್ನು ನಡೆಸುವಷ್ಟೇ ವಿಚಕ್ಷಣೆಯಿಂದ ನಿರ್ದೇಶಿಸುತ್ತಿದ್ದ ಅವರ ಗುಂಪಿನ ನಾಯಕನ ನಿರ್ದೇಶನದಲ್ಲಿ ಒಂದಿಬ್ಬರು ದಪ್ಪನೆಯ ಹಗ್ಗಗಳನ್ನು ಹಿಡಿದು ಓಡಾಡ್ತಿದ್ರು.

ಬೇಗ ಬೇಗ ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಕೆಳಗೆ ನಡೆದೆ. ಸೂಪರ್ವೈಸ್ ಮಾಡೋರ ಹಾಗೆ ತನ್ನ ಸಿಟ್ ಔಟಿನ ಕುರ್ಚಿಯ ಮೇಲೆ ನಿರ್ಭಾವುಕನಾಗಿ ಕೂತ್ಕೊಂಡು ಎಲ್ಲಾನ್ನೂ ನೋಡ್ತಿದ್ದ ಹ್ಯಾರಲ್ಡ್, ನಂಗೂ ಕೂರುವಂತೆ ಪಕ್ಕದ ಕುರ್ಚಿಯತ್ತ ಸನ್ನೆ ಮಾಡಿದ. ಮಾನವನ ಕ್ರೂರತೆಯೆದುರು ಮೈಯ್ಯೊಡ್ಡಿ ನಿಂತು ಆಗಲೇ ಅರ್ಧದಷ್ಟು ಬೋಳಾಗಿ ವಿಕಾರವಾಗಿ ಕಾಣ್ತಿದ್ದ ಮರದ ನಿಸ್ಸಹಾಯಕತೆಯನ್ನು ನೋಡಲಾರದೆ, ಮಲ್ಚರಿನ ಕಾರ್ಯ ವೈಖರಿಯನ್ನಾದ್ರೂ ನೋಡೋಣಾಂತ ಆ ಕಡೆಗೆ ಹೋದೆ.

ಕೋರೆಹಲ್ಲಿನಂತಿದ್ದ ತನ್ನ ಫೋರ್ಕಿನ ಎರಡು ಮುಳ್ಳಿನ ಮೇಲೆ, ಕೆಳಗೆ ಉರುಳುತ್ತಿದ್ದ ರೆಂಬೆಗಳನ್ನು ತತ್-ತಕ್ಷಣ ಎತ್ತಿಕೊಂಡು ಮಲ್ಚರಿನ ಕಡೆ ಹೋಗ್ತಿದ್ದ ಫೋರ್ಕ್ ಲಿಫ್ಟು,

ತಿರುಗುತ್ತಿದ್ದ ಮಲ್ಚರಿನ ಚಕ್ರಕ್ಕೆ ಅಷ್ಟು ದೊಡ್ಡ ದೊಡ್ಡ ರೆಂಬೆಗಳ ಹಸುರಾದ ಭಾಗದ ಒಂದು ತುದಿಯನ್ನು ಕೊಡುತ್ತಿತ್ತು. ಅದನ್ನು ಅತಿ ರಭಸದಲ್ಲಿ ತನ್ನತ್ತ ಸೆಳೆದುಕೊಳ್ಳುತ್ತಿದ್ದ ಆ ಚಕ್ರ, ಕ್ಷಣ ಮಾತ್ರದಲ್ಲಿ ಅದನ್ನು ಪುಡಿಯಾಗುವಂತೆ ಅರೆಯುತ್ತಿತ್ತು. ಹಿಂಭಾಗದಲ್ಲಿ ದೈತ್ಯ ಕಾಫೀಪುಡಿ ಮೆಶಿನ್ನಿನ spout-ನಂತಿದ್ದ ಎತ್ತರದ ಒಂದು ಪೈಪಿನಿಂದ ಸಿಗುರು ಸಿಗುರಾದ ಮರದ ಹೊಟ್ಟು (mulch) ಧಾರೆಯಂತೆ ಒಂದೇ ಸಮ ಟ್ರಕ್ಕಿನೊಳಗೆ ಬೀಳುತ್ತಿತ್ತು. ನೋಡ್ತೀನಿ, ಅಷ್ಟರಲ್ಲಾಗಲೇ ಟ್ರಕ್ಕಲ್ಲೊಂದು ಒಂದು ಪುಟ್ಟ ಗುಡ್ಡಾನೇ ರೂಪುಗೊಂಡಿದೆ!

ವಿದ್ಯುತ್ತನ್ನು ಕೆಲ ಕಾಲ ಸ್ಥಗಿತಗೊಳಿಸಲು ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನ ಪರ್ಮಿಶನ್ನೂ ಬೇಕಿಲ್ಲದೆ, ಯಾರ ಮರ್ಜಿಯನ್ನೂ ಬೇಡದೆ ಅಷ್ಟು ದೊಡ್ಡ ಮರಾನಾ ಹೀಗೆ ಕಡಿದು ಗುಡ್ಡೆ ಹಾಕೋದೂಂದ್ರೆ ನಮಗೆ ಊಹಿಸಲೂ ಅಸಾಧ್ಯ ಅಲ್ವೇ? ಚಾಕಚಕ್ಯತೆಯಿಂದ ಕಡಿಯೋದಿರಲಿ, ಅದಕ್ಕಿಂತಾ ಹೆಚ್ಚಾಗಿ ಆ ದಿಮ್ಮಿಗಳನ್ನೂ ಹೇಳಹೆಸರಿಲ್ಲದಂತೆ ಮಾಡ್ತಿದ್ದಿದ್ದು ನೋಡಿದ್ರೆ ಅಚ್ಚರಿಯಾಗೋ ವಿಷಯವೇ! ಸಣ್ಣದಾಗಿ ಚಕ್ಕೆ ಚಕ್ಕೆಯಾಗಿರೋ ಮಲ್ಚ್-ಗೇನೋ ವಿಪರೀತ ಬೇಡಿಕೆ ಇಲ್ಲಿ. ಆರಾರು ತಿಂಗಳು ಇರೋ ಚಳಿಗಾಲದಲ್ಲಿ ಒಂದೇ ಸಮ ಸುರಿಯುವ ಅಡಿಗಳಗಟ್ಟಲೆ ಹಿಮದಿಂದ ಗಿಡ ಮರಗಳ ಬೇರು ಮತ್ತು ಬುಡದಲ್ಲಿರುವ ಕಾಂಡವನ್ನು ರಕ್ಷಿಸಕ್ಕೋಸ್ಕರ ಮಣ್ಣೇ ಕಾಣಿಸದಷ್ಟು ದಟ್ಟವಾಗಿ ಈ ಮಲ್ಚನ್ನ ಗಿಡಮರಗಳ ಸುತ್ತಲೂ ಸುರಿದು ಹರಡಿರ್ತಾರೆ.

ನೋಡ್-ನೋಡ್ತಾನೇ ಎರಡು ಘಂಟೆಗಳಲ್ಲಿ ಮುಗಿಸೇಬಿಟ್ಟರು ಅರವತ್ ತೆಪ್ಪತ್ತಡಿ ಎತ್ತರದ ಆ ಮರದ ಅಷ್ಟು ವರ್ಷದ ಕತೇನ! ಮರದ ಕೆಳಗೆ ಒಂದೇ ಒಂದು ದಿಮ್ಮಿನೇ ಆಗಲಿ, ಕೆಳಗುದುರಿದ ಅದರ ಸೂಜಿಗಳೇ ಆಗಲಿ, ಮಲ್ಚ್ (ಹೊಟ್ಟು) ಆಗಲಿ ಉಳಿಸಿರಬೇಕಲ್ಲ! ಎಲ್ಲಾನ್ನೂ ಸರಸರಾಂತ ಇಬ್ಬರು ರೇಕ್ನಲ್ಲಿ ಗುಡಿಸಿ ಎತ್ತಾಕಿದರು. ಚಿಕ್ಕಮಕ್ಕಳ ಅಂಗೈಯ್ಯ ಮೇಲೆ 'ಸಾರಿಸೀ-ಗುಡಿಸೀ' ಅಂತ ನಾವು ಮಾಡ್ತೀವಲ್ಲ ಹಾಗೆ! ಒಂದು ಸಮಯ ಏನಾದರೂ ಗೊತ್ತಿದ್ದಿದ್ರೆ ರಂಗೋಲೇನೂ ಹಾಕಿಬಿಟ್ಟಿರೋರೇನೋ, ಅಂಥಾ ಅಚ್ಚುಕಟ್ಟು ಕೆಲಸ! ಆಮೇಲೆ ನಮ್ಮನೆಗೆ ಬಂದು ವಿದ್ಯುತ್ ಪೂರೈಕೆಯಲ್ಲಿ ತೊಂದರೆ ಮಾಡಿದ್ದಕ್ಕಾಗಿ ಮತ್ತೊಮ್ಮೆ ವಿನಯದಿಂದ ಕ್ಷಮೆ ಬೇಡಿ, ತಮ್ಮ ಬೃಹತ್ ಟ್ರಕ್ ಹತ್ತಿಸಿಕೊಂಡು ಹೊರಟರು! ದಿಮ್ಮಿಗಳಿಗಾಗಿರಬಹುದೂಂತ ನಾನು ಅಂದುಕೊಂಡಿದ್ದ ಟ್ರಕ್ಕಿನಲ್ಲಿ ನಮ್ಮೆಲ್ಲರ ನೆಚ್ಚಿನ ಪೈನ್ ಮರ ಒಂದು ಚಿಕ್ಕ ಬೆಟ್ಟದಂತೆ ಬಿದ್ದಿತ್ತು.

ಆ ಮರದ ಹತ್ತಿರ ಹಾದು ಹೋಗುತ್ತಿದ್ದ ಪವರ್ ಲೈನು, ನಮ್ಮನೆಯ ಕಾರ್ ಶೆಡ್ಡು ಇತ್ಯಾದಿಗಳ ಮೇಲಿನ ಕಾಳಜಿಗಾಗಿ ಯಾರಿಂದಲೂ ಹೇಳಿಸಿಕೊಳ್ಳದೆ ನಿರ್ಧರಿಸಿ, ಯಾರಿಗೂ ತೊಂದರೆಯಾಗದಂತೆ ಕಾರ್ಯಗತಗೊಳಿಸಿದ ಹ್ಯಾರಲ್ಡ್ ಮತ್ತು ಈ ಜನರ ಸಿವಿಕ್ ಸೆನ್ಸನ್ನು ಮನಸ್ಸಿನಲ್ಲೇ ಮೆಚ್ಚುತ್ತಾ, ಭಿಂ ಅಂತನ್ನಿಸ್ತಿದ್ದ ಖಾಲಿ ಜಾಗ ನೋಡ್ತಾ ಆಫ್ ಆಗಿದ್ದ ಮೂಡ್ನಲ್ಲಿ Ann Arbor Art Fair-ಗೆ ಹೊರಡಕ್ಕೆ ತಯಾರಾಗಲು ಮನೆಯೊಳಕ್ಕೆ ಹೋದೆ. ಅಂದಹಾಗೇ ಅದರ ಬಗ್ಗೆ ಇನ್ನೊಂದ್ ಸಲ ಹೇಳ್ತೀನೀ. ಅಲ್ಲಿಯವರೆಗೂ... ಬೈ.

✵

# ದೇವನುಂಟೇ..... ಇಲ್ಲವೇ !

- ಎಚ್. ಗೋಪಾಲಕೃಷ್ಣ

**ಮೊ**ನ್ನೆ ಸಿಕ್ಕಿದ್ದ ನನ್ನ ಗೆಳೆಯರೊಬ್ಬರು ಅವರ ಇತ್ತೀಚಿನ ಅನುಭವವನ್ನು ಹಂಚಿಕೊಂಡರು. ಅವರ ಅನುಭವವನ್ನು ಅವರ ಮಾತಿನಲ್ಲಿಯೇ ನಿಮಗೆ ತಿಳಿಸಲೇ?

ನಾನು ನಿಮಗೆ ಗೊತ್ತಿದ್ದ ಹಾಗೇ ನಲವತ್ತು ವರ್ಷ ರೈಲಿನಲ್ಲಿಯೇ ಓಡಾಡಿರುವವನು. ಪ್ರತಿದಿವಸ ಮೈಸೂರಿನಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಮೈಸೂರಿಗೆ ಅದೆಷ್ಟು ಸಾವಿರ ಸಲ ಓಡಾಡಿದ್ದೀನಿ ಅಂದರೆ ರೂಟಿನಲ್ಲಿರುವ ಪ್ರತಿಯೊಂದು ಮರವೂ, ಲೈಟುಕಂಬವೂ ನನಗೆ ಗೊತ್ತು. ಅಷ್ಟೇ ಏಕೆ ರೈಲಿನಲ್ಲಿ ತಿಂಡಿ ಮಾರಿಕೊಂಡು ಬರುತ್ತಾರಲ್ಲಾ ಅವರೆಲ್ಲರೂ ನನಗೆ ಅವರ ಮೊದಲ ಹೆಸರಿನ ಮೂಲಕ ಪರಿಚಿತರು. ಅದೆಷ್ಟು ಸಲ ಮೈಸೂರಿನ ರೈಲಿಗೆ ರಷ್ನು ಹೆಚ್ಚಾದಾಗ ನಾನು ರೈಲಿನ ಬೋಗಿಯ ಬಾಗಿಲಲ್ಲಿ ಕೂತು ಬಂದಿಲ್ಲವೇ? ಆದರೂ ನೋಡಿ ಮೊನ್ನೆ ಹೀಗಾಗಿಬಿಡ್ತು. ಕೇರಳಕ್ಕೆ ಅಂತ ಹೋಗಿದ್ದೆನಲ್ಲಾ, ಅಲ್ಲಿನ ಕೆಲಸ ಮುಗಿಸಿಕೊಂಡು ವಾಪಸ್ಸು ಬರ್ತಾ ಆಗಿದ್ದು ಇದು. ಅದು ಸೂಪರ್ ಫಾಸ್ಟ್ ರೈಲು. ನನಗೆ ರಿಸರ್ವ್ ಆಗಿದ್ದ ಬೋಗಿ ಅವಸ್ಥೆ ಏನು ಅಂದರೆ ಇಡೀ ರೈಲಿನಲ್ಲಿ ಅದರ ಸೀಟು ಒಂದರ ಹಿಂದೆ ಒಂದು ಇರೋ ರೀತಿ ಅಂದರೆ ಬಸ್ಸಿನ ಸೀಟುಗಳಿದ್ದ ಹಾಗೆ. ಸೀಟಿನಲ್ಲಿ ನೀವು ಕೂತಿರಿ ಅಂದರೆ ಎದುರು ಕೂತಿರುವವರು ನಿಮಗೆ ಕಾಣಿಸೊಲ್ಲ, ಬದಲಿಗೆ ಅವರು ಕೂತಿರುವ ಸೀಟಿನ ಹಿಂಭಾಗ ನೀವು ನೋಡಿಕೊಂಡು ಕೂತಿರಬೇಕು. ಅದಕ್ಕಿಂತಲೂ ಹಾಳಾದ್ದು ಅಂದರೆ ಒಂದೊಂದು ಕಡೆ ಮೂರು ಜನಕ್ಕೆ ಅಂತ ಸೀಟು ನಂಬರು ಕೊಟ್ಟಿರ್ತಾರೆ, ಅದರಲ್ಲಿ ನನ್ನ ಸೈಜಿನವರು ಒಂದೂವರೆ ಜನವೇ ಕೂಡೋದಕ್ಕೆ ಆಗೋದು!

ನಾವೋ ಫ್ಯಾಮಿಲಿ ಪೂರ್ತಿ ಹೋಗಿದ್ದು. ಎದುರು ಬದುರು ಕೂತು ಮಾತನಾಡುವ ಹಾಗಿಲ್ಲ, ಅಲ್ಲದೇ ಇಕ್ಕಟ್ಟಿನ ಸೀಟು.ಅದಕ್ಕೇ ನಾನೊಂದು ಉಪಾಯ ಹುಡುಕಿದೆ. ನಾವು ಕೂತಿದ್ದ ಮೂರು ಸೀಟಿನಲ್ಲಿ ಎರಡು ಬಿಟ್ಟು ನಾನು ಬಾಗಿಲ ಬಳಿ ಕೂತರೆ ಆಯಿತು ಅಂತ ಪ್ಲಾನ್ ಮಾಡಿದೆ. ರೈಲು ಹೊರಟ ಕೂಡಲೇ ಹೋಗಿ ಅಲ್ಲಿ ಕೂತುಬಿಟ್ಟೆ, ಅದು ಸೂಪರ್ ಫಾಸ್ಟ್ ರೈಲು ಅಂದೆನಲ್ಲಾ ಹೇಗೆ ಹೋಗ್ತಾ ಇತ್ತು ಅಂದರೆ ಇಡೀ ತಲೆಯೇ ಹಾರಿಹೋಗುತ್ತೇನೋ ಅನಿಸಿಬಿಡೋದು ಅದು ಹೋಗುತ್ತಿದ್ದ ವೇಗಕ್ಕೆ. ಮೈಸೂರು ರೈಲಿನಲ್ಲಿ ಹೀಗೇ ಹೋಗ್ತಾ ಇದ್ದೋನು ನಾನು, ಹಳೇ ಕಾಲದ ಮೈಸೂರು ರೈಲಿನಲ್ಲಿ ಗೆಳೆಯರ ಜತೆಗೆ ಹೋಗಿದ್ದನ್ನ ನೆನೆಸಿಕೊಳ್ಳುತ್ತಾ ಬಾಗಿಲ ಹತ್ತಿರ ಕೂತು ಸುಖ ಅನುಭವಿಸುತ್ತಿದ್ದೆ. ಎರಡು ಮೂರು ಸ್ಟೇಷನ್ನು ಬಂದವು. ಹತ್ತುವವರಿಗೆ ಕೊಂಚ ಜಾಗ ಬಿಟ್ಟು ಮತ್ತೆ ಅಲ್ಲೇ ಕೂಡುತ್ತಿದ್ದೆ. ಯಾರೋ ಒಬ್ಬ ಆ ಜಾಗದಲ್ಲಿ ಕೂತುಕೊಳ್ಳಲು ಬಂದ. ಅವನಿಗೆ ಈ ಜಾಗ ಬಿಡಲ್ಲ, ನಾನು

ಆಗಿನಿಂದ ಇಲ್ಲೇ ಕೂತು ಬಂದಿರೋದು ಅಂತ ಜಗಳ ಕಾದು ಹಕ್ಕೂ ಸ್ಥಾಪಿಸಿದೆ. ಇದರಲ್ಲೇನು ಅಂತಹ ದೊಡ್ಡ ಸಂಗತಿ ಅಂತ ನೀವು ಕೇಳ್ತೀರೀ ಅಂತ ಗೊತ್ತು. ಇರಿ ಅದಕ್ಕೇ ಬರ್ತಿದೀನಿ.

ನಾಲ್ಕೈದು ಗಂಟೆ ಹೀಗೆ ಪ್ರಯಾಣಿಸಿರಬಹುದು. ಆಗಾಗ ಚಾಯ ಮಾರುವವರು, ಮೆದುವಡ ಮಾರುವವರು, ಬಾಳೆಹಣ್ಣು ಬಜ್ಜಿ ಮಾರುವವರು..... ಹೀಗೆ ಅವರೆಲ್ಲಾ ಕೂಗೋದು ಕಿವೀಗೆ ಬೀಳುತ್ತಿತ್ತು. ಹಿಂದೆ ತಿರುಗಿ ಅವರನ್ನು ಕರೆಯಲು ಬೇಜಾರಾಗಿ ಹಾಗೇ ಜಾಗ ಹಿಡಿದು ಕೂತಿದ್ದೆ. ಚಾಯ್ ಚಾಯ್ ಅಂತ ಸುಮಾರು ಹೊತ್ತಾದ ಮೇಲೆ ಒಬ್ಬ ಕೂಗಿಕೊಂಡು ಚಾಯ ಮಾರಿಕೊಂಡು ಹೋಗುತ್ತಿದ್ದ. ತುಸು ಹಿಂದೆ ತಿರುಗಿ ಚಾಯಾ ಅಂತ ಜೋರಾಗೇ ಕರೆದೆ. ಅವನು ಬೋಗಿ ದಾಟಿದ್ದವನು, ನನ್ನ ಕೂಗು ಕೇಳಿ ಬಂದ. ಒಂದು ಚಾಯ ಕೊಡು ಅಂದೆ ಅವನಿಗೆ ಅರ್ಥವಾಗುವ ಭಾಷೆಯಲ್ಲಿ. ಪೇಪರ್ ಲೋಟಕ್ಕೆ ಚಾಯ ಬಗ್ಗಿಸುವ ಮೊದಲು ನಾನು ಕೂತಿದ್ದ ರೀತಿ ನೋಡಿದ.

ಸಾರ್ ಹಾಗೆ ಕೂತ್ಕೋಬೇಡಿ. ಹೋದವಾರ ಯಾರೋ ಹೀಗೇ ಕೂತು ಅವರ ಕಾಲು ಫ್ಲಾಟ್ ಫಾರಮ್ಮಿಗೆ ಬಡಿದು ಕಾಲೇ ಹೋಗಿಬಿಡ್ತು.... ಅಂದ!

ನಾನು ಎಷ್ಟು ವರ್ಷದಿಂದ ರೈಲಿನಲ್ಲಿ ಓಡಾಡ್ತಾ ಇದೀನಿ ಗೊತ್ತಾ? ಸುಮ್ಮನೆ ಟೀ ಕೊಟ್ಟು ಕಾಸು ಇಸ್ಕೊಂಡು ಜಾಗ ಖಾಲಿ ಮಾಡು ಅಂತ ಅವನಿಗೆ ಹೇಳಬೇಕು ಅಂತ ಇದ್ದವನು ಎರಡೂ ಕಾಲುಗಳನ್ನು ಮೇಲೆ ಎತ್ತಿದೆ ಚಕ್ಕಳ ಮಕ್ಕಳ ಹಾಕಿ ಕೂತು ಅವನ ಹತ್ತಿರ ಟೀ ಇಸಕೊಂಡು ಕಾಸುಕೊಟ್ಟು ಕಳಿಸಿದೆ.

ಟೀ ಇನ್ನೂ ಅರ್ಧ ಕಪ್ಪೂ ಕುಡಿದಿಲ್ಲ. ಏನಾಯಿತು ಗೊತ್ತಾ? ಚಕ್ಕಳ ಮಕ್ಕಳ ಹಾಕಿ ಕೂತು ಚಪ್ಪಲಿಯನ್ನ ಕಾಲಿಗೆ ಸಿಕ್ಕಿಸಿಕೊಂಡೇ ಕೊಂಚ ಮುಂದೆ ದೂಡಿದ್ದೆ. ರೈಲು ಜೋರಾಗಿ ಯಾವುದೋ ಸ್ಟೇಷನ್ನನ ಹಾದು ಹೋಯಿತು – ಅಲ್ಲಿ ಅದಕ್ಕೆ ನಿಲ್ದಾಣ ಇಲ್ಲ ಅಂತ ಕಾಣುತ್ತೆ. ಮೆಟ್ಟಿಲ ಸಮೀಪ ಫ್ಲಾಟ್ ಫಾರಮ್ಮು ಅದಕ್ಕೆ ತಗಲುವ ಹಾಗೆ ನನ್ನ ಚಪ್ಪಲಿ ಮುಂದಕ್ಕೆ ಇದ್ದದ್ದು. ಚಪ್ಪಲಿ ಫ್ಲಾಟ್ ಫಾರಮ್ಮಿಗೆ ತಗುಲಿದ್ದೇ ಹಾರಿ ಎಗರಿ ನೂರು ಮಾರು ಮುಂದಕ್ಕೆ ನನ್ನ ಕಣ್ಣೆದುರೇ ಹಾರಿ ಹೋಗಿಬಿಟ್ಟಿತು! ಅದರಲ್ಲಿ ನನ್ನ ಕಾಲು ಇರಲಿಲ್ಲ ಅಂತ ನನ್ನ ಕಾಲು ಉಳೀತು! ಹತ್ತು ನಿಮಿಷ ಎದೆ ಢವ ಢವ ಅನ್ನುತ್ತಿತ್ತು ರೀ.

ಸದ್ಯ ಅದು ಯಾವ ಸಾಫ್ಟ್ ಕಾರ್ನರು ನನಗೆ ಚಾಯ್ ಮಾರುವವನ ಮಾತು ಕೇಳು ಅಂತ ಪ್ರೇರೇಪಿಸಿತೋ ಕಾಣೆ. ಮಾಮೂಲು ಸಮಯದಲ್ಲಿ ಹೋಗೋ ಭಡವ ರೈಲಿನಲ್ಲಿ ನಲವತ್ತು ವರ್ಷ ಓಡಾಡಿದೀನಿ, ನನಗೇ ಕೆಮ್ಮೋದು ಕಲಿಸೋದಕ್ಕೆ ಬಂದಿದೀಯಾ ಅಂತ ಕೇಳುತ್ತಿದ್ದವನು, ಅವತ್ತು ಅದು ಹೇಗೆ ಅವನ ಮಾತಿಗೆ ಒಪ್ಪಿ ಕಾಲು ಒಳಗೆ ಎಳೆದುಕೊಂಡೆ ಅಂತ ಆಶ್ಚರ್ಯ ನನಗೆ...... ನಿಜವಾಗಲೂ ದೇವರು ಅನ್ನೋದು ಇದೆಯಾ? ಆತ ಗಂಡಸೇ? ದೇವರಿದ್ದಾನಾ? ದೇವರೇ ಆ ಕ್ಷಣಕ್ಕೆ ನನಗೆ ಚಾಯ್ ಮಾರುವನ ಮೂಲಕ ಮುನ್ಸೂಚನೆ ನೀಡಿದನಾ ಅನ್ನಿಸಿಬಿಟ್ಟಿತು. ಹೋದವಾರ ಯಾರೋ ಹೀಗೇ ಕೂತು ಅವರ ಕಾಲು ಫ್ಲಾಟ್ ಫಾರಮ್ಮಿಗೆ ಬಡಿದು ಕಾಲೇ ಹೋಗಿಬಿಡ್ತು ಅಂತ ಚಾಯ್ ಮಾರುವವನು ಹೇಳಿದನಲ್ಲಾ ಅವನಿಗೆ ಯಾತಕ್ಕೆ ಅದೇ ದೇವರು ಯಾರದಾದರೂ ಮೂಲಕ ಮುನ್ಸೂಚನೆ

ನೀಡಲಿಲ್ಲ ಅಂತ ಮತ್ತೊಂದು ಯೋಚನೆ ಶುರುವಾಗಿಬಿಟ್ಟಿತು. ಅಕಸ್ಮಾತ್ ದೇವರು ಇದ್ದಿದ್ದರೆ ನನಗೇ ಒಂದು ಕಾಯಿದೆ ಬೇರೆಯವರಿಗೇ ಮತ್ತೊಂದು ರೂಲು ಮಾಡ್ತಾ ಇದ್ದನೇ ಅಂತ ಶುರುವಾದ ಯೋಚನೆ ಇನ್ನೂ ನಿಂತಿಲ್ಲ ಮಾರಾಯಾ.

ದೇವರು ಇದಾನೋ ಇಲ್ಲವೋ ಬಿಡು, ಯಾರದ್ದೋ ಒಂದು ಮಾತು ಕೇಳಿದ್ದರಿಂದ ನಿನ್ನ ಕಾಲು ಉಳಿತಲ್ಲಾ ಅಂದೆ! ಅಂದ ಹಾಗೆ ದೇವರು ಇದ್ದಾನೋ ಇಲ್ಲವೋ ಅಂತ ನನ್ನ ಗೆಳೆಯ ಅವನ ಸಂಶೋಧನೆ ಮುಂದುವರಿಸಿದ್ದಾನೆ!

---

## (ತುಂಬಾ) ದೂರ ದೃಷ್ಟಿ

ಯುವಕ: ಸಾರ್ ಟೈಂ ಎಷ್ಟು?

ಸೀನಿಯರ್ ಸಿಟಿಜನ್: ಇಲ್ಲ ಹೇಳೊಲ್ಲ.

ಯು: ನನಗೆ ಟೈಂ ಹೇಳಿದರೆ ನಿಮಗೇನು ನಷ್ಟ ಆಗುತ್ತೆ ಸಾರ್?

ಸೀ: ಹೌದು ನನಗೆ ನಷ್ಟ ಆಗುತ್ತೆ.

ಯು: ಹೇಗೆ ಸಾರ್?

ಸೀ: ನೋಡು, ಇವತ್ತು ನಿನಗೆ ಟೈಂ ಹೇಳಿದರೆ ಥ್ಯಾಂಕ್ಸ್ ಎಂದು ಹೇಳಿ ನಾಳೆ ಮತ್ತೆ ಕೇಳ್ತೀಯ.

ಯು: ಸಾಧ್ಯ ಸಾರ್.

ಸೀ: ಎರಡು ಮೂರು ಬಾರಿ ಹೀಗೆ ಭೇಟಿ ಮಾಡಿದ ಮೇಲೆ ನೀನು ನನ್ನ ವಿಳಾಸ ಕೇಳ್ತೀಯ?

ಯು: ಸಾಧ್ಯ ಸಾರ್.

ಸೀ: ಒಂದು ದಿನ ನೀನು ನನ್ನ ಮನೆಗೆ ಬರ್ತೀಯ. ಇಲ್ಲೇ ಬಂದಿದ್ದೆ ಹೀಗೆ ನಿಮ್ಮನ್ನು ನೋಡೋಣ ಅಂತ ಬಂದೆ ಅಂತ ಹೇಳ್ತೀಯ. ಹೌದೊ?

ಯು: ಇರಬಹುದು.

ಸೀ: ನಾನು ನಿನಗೆ ಒಂದು ಕಪ್ ಕಾಫೀ ಕೊಡ್ತೀನಿ. ಅದರಿಂದ ಉತ್ತೇಜಿತನಾಗಿ ಮತ್ತೆ ಬರ್ತೀಯ. ಮತ್ತೆ ಕಾಫಿ ತುಂಬಾ ಚೆನ್ನಾಗಿದೆ ಯಾರು ಮಾಡಿದ್ದು ಅಂತ ಕೇಳ್ತೀಯ. ನಿಜಾನಾ?

ಯ: ನಿಜಾ ಸಾರ್.

ಸೀ: ಆಗ ನನ್ನ ಮಗಳು ಮಾಡಿದ್ದು ಅಂತೀನಿ. ಆಗ ಸುಂದರವಾದ ನನ್ನ ಮಗಳನ್ನು ನಿನಗೆ ಪರಿಚಯ ಮಾಡಿಕೊಡಬೇಕಾಗುತ್ತದೆ.

ಯು: (ನಗುತ್ತಾನೆ).

ಸೀ: ಇನ್ನು ಮುಂದೆ ನೀನು ಅವಳನ್ನು ಪದೇ ಪದೇ ಭೇಟಿ ಮಾಡುವೆ. ಹೊರಗೆ ಹೋಗ್ತೀರಿ. ಹೌದೆ?

ಯುವಕ ನಾಚುತ್ತಾನೆ.

ಸೀ: ನನ್ನ ಮಗಳೂ ನಿನ್ನ ಇಷ್ಟ ಪಡತೊಡಗುತ್ತಾಳೆ. ನೀನು ಅವಳನ್ನು ಪ್ರೀತಿಸತೊಡಗುತ್ತೀಯ. ಪ್ರಪೋಸ್ ಮಾಡುತ್ತೀಯ.

ಯುವಕನ ನಾಚಿಕೆ ಹೆಚ್ಚಾಗುತ್ತದೆ.

ಸೀ: ಒಂದು ದಿನ ಇಬ್ಬರೂ ಬಂದು ಮದುವೆಗಾಗಿ ಅನುಮತಿ ಕೇಳುತ್ತೀರಿ.

ಯು: ಸಾಧ್ಯ ಸಾರ್.

ಸೀ: (ಕೋಪದಿಂದ) ಮಿಸ್ಟರ್, ಹೋಗು ಹೋಗು ವಾಚ್ ಸಹ ಇಲ್ಲದ ನಿನ್ನಂತಹವನಿಗೆ ನಾನು ನನ್ನ ಮಗಳನ್ನು ಕೊಡುವುದಿಲ್ಲ.

- **ಧೃತರಾಷ್ಟ್ರ**

# ಕೊಂಬೆ ಕತ್ತರಿಸಿದ ಮರಕ್ಕೆ ಬೇತಾಳ

**- ನಾಗೇಶ ಹೆಗಡೆ**

‘‘**ಎ**ಲ್ಲ ಸಾಲಾಗಿ ನಿತ್ಕಂಡವೆ – ಮಿಂಟೊ, ವಿಕ್ಟೋರಿಯಾ, ವಾಣಿವಿಲಾಸ, ಬೀಯಮ್ಮಿ, ಕೆಂಪೇಗೌಡ... ಎಲ್ಲಾ ಆಸ್ಪತ್ರೆನೂ ಒಂದರ ಪಕ್ಕ ಒಂದು ಐತೆ’’ ಎಂದು ನಮ್ಮ ಹಳ್ಳಿಯ ಮಾಜಿ ರೈತ ಆಂಜನಪ್ಪ ಹೇಳಿದ್ದ. ‘‘ಹುಡುಕೋದು ಕಷ್ಟ ಇಲ್ಲ ಹೋಗಿ’’ ಎಂದಿದ್ದ.

ಆಸ್ಪತ್ರೆಯ ಎದುರು ರೋಗಿಗಳು ಸಾಲಾಗಿ ನಿಲ್ಲೋದು ಗೊತ್ತಿತ್ತು. ಆದರೆ ರೋಗಿಯ ಎದುರು ಹೀಗೆ ಸಾಲಾಗಿ ಆಸ್ಪತ್ರೆಗಳು ಇರೋದು ಎಲ್ಲಾದರೂ ಉಂಟೆ? ಅವರಿವರನ್ನು ಕೇಳುತ್ತ ಸೀದಾ ಕೆಂಪೇಗೌಡ ಆಸ್ಪತ್ರೆಗೆ ಹೋಗಿ ‘ಎಲ್ಲಿದೆ ಅಲರ್ಜಿ ವಿಭಾಗ?’ ಎಂದು ಸಮವಸ್ತ್ರದ ವಾಚ್‌ಮನ್‌ಗೆ ಕೇಳಿದೆ. ‘ಕೋನ್ಸಾ ಬಾಗ್?’ ಎಂದು ಆತ ಬಿಹಾರಿ ಹಿಂದಿಯಲ್ಲಿ ನನ್ನನ್ನೇ ಕೇಳಿದ.

‘ಕನ್ನಡವೇ ನನ್ನುಸಿರು’ ಎಂದು ಬೆಂಗಳೂರಿನ ರಾಜಸ್ಥಾನಿ ಶಾಲಾ ಮಕ್ಕಳೂ ಕೂಗಿ ಕೂಗಿ ಹೇಳುವ ನವ+ಅಂಬರ ಮಾಸ ಇದು. ನಾನಿರುವ ಹಳ್ಳಿಯಲ್ಲಿ ನನ್ನಾಕೆಗೆ ಅದೆಂಥದೊ ಅಲರ್ಜಿಯಾಗಿ ಉಸಿರಾಟವೇ ಕಷ್ಟವಾಗಿತ್ತು. ಮೊದಮೊದಲು ಪ್ರತಿ ನವೆಂಬರ್ ಬಂದಾಗಲೂ ಹೀಗೆಯೇ ಫಜೀತಿಯಾಗುತ್ತಿತ್ತು. ‘ನಿನಗೆ ಕನ್ನಡವೇ ಅಲರ್ಜಿ ಆಗಿದ್ದೀತು’ ಎಂದು ರೇಗಿಸಿ ಬೈಸಿಕೊಂಡಿದ್ದೂ ಇದೆ. ಈಗ ನೋಡಿದರೆ ಜೂನಿನ ಮಳೆ, ಆಗಸ್ಟಿನ ಬೂಷ್ಟು, ಡಿಸೆಂಬರಿನ ಚಳಿ ಎಲ್ಲವೂ ಅಲರ್ಜಿ ತಿಂಗಳೇ ಆಗುತ್ತಿದ್ದವು. ‘ಸಿಟಿಗೆ ಹೋಗಿ ಕೆ.ಎಮ್.ಸಿ.ಯ ಅಲರ್ಜಿ ತಜ್ಞರಿಗೆ ತೋರಿಸಿ’ ಎಂದು ಯಾರೋ ಹೇಳಿದ ಪ್ರಕಾರ ಬೆಳಿಗ್ಗೆಯೇ ಬಸ್ ಹಿಡಿದು ಅವಳು ಹೋಗಿದ್ದಳು. ಕಾಫಿಗೆ ತಿಂಡಿ ಕೊಟ್ಟು, ತೆಂಗಿಗೆ ನೀರು ಕೊಟ್ಟು ಮೂರು ಗಂಟೆ ಬಿಟ್ಟು ನಾನೂ ಹೋಗಿದ್ದೆ.

ಅಲ್ಲಿ ಅಲರ್ಜಿ ವಾರ್ಡಿನಲ್ಲಿ ಸಾಲಾಗಿ ಕುಳಿತ ಮಹಿಳೆಯರ ಮಧ್ಯೆ ನನ್ನವಳನ್ನು ಗುರುತಿಸಿದೆ. ಧ್ಯಾನಮಗ್ನ ಯೋಗಿ/ನಿಗಳ ಹಾಗೆ ಅಲ್ಲಿದ್ದವರು ಅನೇಕ ಹೆಂಗಸರು, ಹಿರಿಯರು, ಮಕ್ಕಳೆಲ್ಲ ಎರಡೂ ಕೈಗಳ ತೋಳನ್ನು ನೀಳ ಮಾಡಿ ಕೂತಿದ್ದರು. ಎಲ್ಲರ ಎರಡೂ ತೋಳುಗಳ ಮೇಲೆ ಸಾಲಾಗಿ ಹತ್ತೆಂಟು ಚುಕ್ಕಿ ಗುರುತು ಹಾಕಿ, ಒಂದೊಂದು ಚುಕ್ಕಿಯ ಮೇಲೂ ನರ್ಸಮ್ಮ ಅದೆಂಥದೊ ದ್ರಾವಣ ಬೊಟ್ಟು ಇಟ್ಟು ಕೂರಿಸಿದ್ದರು.

ಯಾರ್‍ಯಾರಿಗೆ ಏನೇನು ಅಲರ್ಜಿ ಇದೆ ಎಂಬುದನ್ನು ಪರೀಕ್ಷೆ ಮಾಡುವ ವಿಧಾನ ಅದಾಗಿತ್ತು. ತೋಳಿನ ಮೇಲಿದ್ದ ಚುಕ್ಕಿಗಳಲ್ಲಿ ಒಂದು ಚುಕ್ಕಿಯ ಮೇಲೆ ಈರುಳ್ಳಿ ರಸದ ಬೊಟ್ಟು, ಇನ್ನೊಂದರ ಮೇಲೆ ಸಾಸಿವೆ ಎಣ್ಣೆಯ ಬೊಟ್ಟು ಅಥವಾ ಕಾಫಿ ಡಿಕಾಕ್ಷನ್ ತೊಟ್ಟು; ಮತ್ತೊಂದರ ಮೇಲೆ ಅಣಬೆ ದ್ರಾವಣ, ಮಗದೊಂದರ ಮೇಲೆ ಪಾರ್ಥೇನಿಯಂ ರಸ....

ಹೀಗೆ ಇಟ್ಟು ಅದರ ಮೇಲೆ ಮೆಲ್ಲಗೆ ಚುಚ್ಚುತ್ತಾರೆ. ಯಾವ ಬೊಟ್ಟಿನ ಮೇಲೆ ಪುಟ್ಟ ಬೊಬ್ಬೆ ಏಳುತ್ತದೊ ಅದು ಅವರಿಗೆ ಅಲರ್ಜಿ.

ಈ ಯಾವುದೂ ನನ್ನವಳಿಗೆ ಅಲರ್ಜಿಕಾರಕ ಅಲ್ಲ ಎಂಬುದು ನನಗೂ ಗೊತ್ತಿತ್ತು, ಅವಳಿಗೂ ಗೊತ್ತಿತ್ತು. ಆದರೆ ಡಾಕ್ಟರ್‌ಗಳಿಗೆ ಗೊತ್ತಿರಲಿಲ್ಲವಲ್ಲ! ಎಲ್ಲಾ ಪರೀಕ್ಷೆಗಳೂ ಮುಗಿದು, ಏನೂ ಅಲರ್ಜಿ ಇಲ್ಲವೆಂದು ವೈದ್ಯರಿಗೆ ಖಾತ್ರಿಯಾದ ನಂತರ ಔಷಧಗಳ ಪಟ್ಟಿಯೊಂದು ನಮ್ಮ ಕೈಗೆ ಬಂತು. ''ನಿಮಗೆ ದೂಳುತಿಗಣೆ ಅಲರ್ಜಿ ಇದೆ. ಇದಕ್ಕೆ ಸ್ಪೆಶಲ್ ಔಷಧ ಬೇಕು. ಇದು ಬೆಂಗಳೂರಿನಲ್ಲಿ ಸಿಗೋದಲ್ಲ; ಮುಂಬೈಯಿಂದ ತಯಾರಾಗಿ ಬರಬೇಕು. ಮುಂಗಡ ಕೊಟ್ಟು ಒಂದು ತಿಂಗಳು ಬಿಟ್ಟು ಬನ್ನಿ; ಔಷಧ ತರಿಸಿಡುತ್ತೇವೆ'' ಎಂದರು ಡಾಕ್ಟರು. ಅಲರ್ಜಿಗೆ ನಿರ್ದಿಷ್ಟ ಕಾರಣ ಗೊತ್ತಿಲ್ಲದಿದ್ದರೆ ರೋಗಿಗೆ ವರ್ಷಾವಧಿ ಈ ಔಷಧ ಕೊಟ್ಟು ನೋಡುವ ಪದ್ಧತಿ ಇದೆಯಂತೆ.

ಪರೀಕ್ಷೆ ಮಾಡಿಸಿದ ತಪ್ಪಿಗೆ 700 ರೂಪಾಯಿ ಶುಲ್ಕ ತೆತ್ತು, ಔಷಧಕ್ಕೆ ಸಾವಿರ ಮುಂಗಡ ಕೊಟ್ಟು ಮರಳಿ ಸಿಟಿ ಮಾರ್ಕೆಟ್‌ನ ಸದ್ದುಗದ್ದಲದ ನಡುವೆ ಕಲ್ಲುಚಪ್ಪಡಿಗಳ ಮೇಲೆ ದಾಟುತ್ತ ಬರುವಾಗ ಅವಳ ಉಬ್ಬಸ ಹೇಳ ಹೆಸರಿಲ್ಲದಂತೆ ಮಾಯವಾಗಿತ್ತು. ಊಟಿಯ ಶುದ್ಧಗಾಳಿಯನ್ನು ಮನಸಾ ಹೀರುವಂತೆ ಈಕೆ ಸಿಟಿಮಾರ್ಕೆಟ್ಟಿನ ಸಂತೆಯಲ್ಲಿ ದೀರ್ಘ ಉಸಿರುಬಿಟ್ಟು 'ಸಿಟಿ ಗಾಳೀನೇ ಬೆಟರ್' ಎಂದಳು. ಇತ್ತ ಲಾರಿ-ಬಸ್‌ಗಳ ಡೀಸೆಲ್ ವಾಸನೆ, ಅತ್ತ ಕೊಳೆತ ತರಕಾರಿಗಳ ದುರ್ನಾತ, ಆ ಕಡೆ ಡೀಸೆಲ್ ಜನರೇಟರ್‌ನಿಂದ ಹೊಮ್ಮುವ ಘಾಟು, ಹೊಗೆ, ಈ ಕಡೆ ಸಿಂಧಿ ಹಸುಗಳ ಗಂಜಳ ಪರಿಮಳದ ಮಧ್ಯೆ ''ಮೈ ಲಂಗ್ಸ್ ಆರ್ ಫುಲ್'' ಎಂದಳು.

★★★

ಇಷ್ಟು ಕತೆ ಹೇಳಿ, ತ್ರಿವಿಕ್ರಮನ ಹೆಗಲ ಮೇಲಿದ್ದ ಬೇತಾಳ ಕೊನೆಗೊಂದು ಪ್ರಶ್ನೆ ಹಾಕಿತು:

''ಉಸಿರಾಟಕ್ಕೆ ಶುದ್ಧ ಗಾಳಿ ಬೇಕೆನ್ನೋದು ಎಲ್ಲರ ಕನಸು. ಅದಕ್ಕೆಂದೇ ಶ್ರೀ ಮತ್ತು ಶ್ರೀಮತಿ ಹೆಗಡೆ ಈ ಕೊಳಕು ನಗರವನ್ನು ಬಿಟ್ಟು ಹಳ್ಳಿಗೆ ಹೋಗಿ ವಾಸ್ತವ್ಯ ಹೂಡಿದ್ದರು. ಆದರೂ ಅವರಿಗೆ ಹಳ್ಳಿಯಲ್ಲಿ ಉಸಿರಾಟದ ತೊಂದರೆ ಕಾಣಿಸಲು ಕಾರಣವೇನು? ದೂಳು ತುಂಬಿದ ಈ ನಗರಕ್ಕೆ ಭೇಟಿ ನೀಡಿದಾಗಲೆಲ್ಲ ಅವರು ಹಾಯಾಗಿ ಉಸಿರಾಡಲು ಕಾರಣವೇನು? ಈ ಪ್ರಶ್ನೆಗೆ ಉತ್ತರ ತಿಳಿದೂ ನೀನು ಮೌನವಾಗಿದ್ದರೆ, ಹೋಲ್ಡರಿಂದ ಉದುರಿದ ಅಗ್ಗದ ಚೀನೀ ಸಿ.ಎಫ್.ಎಲ್.ಗಳ ಹಾಗೆ ನಿನ್ನ ತಲೆ ಸಿಡಿದು ಸಹಸ್ರ ಹೋಳಾದೀತು'' ಎಂದಿತು.

ಮಾರಲೆಂದು ತಂದಿದ್ದ ತೆಂಗಿನಕಾಯಿ ಮೂಟೆಯನ್ನು ಆ ಹೆಗಲಿನಿಂದ ಈ ಹೆಗಲಿಗೆ ವರ್ಗಾಯಿಸಿ ತ್ರಿವಿಕ್ರಮ ಉತ್ತರಿಸಿದ: ''ಶ್ರೀಮತಿ ಹೆಗಡೆಗೆ ಮೊದಲಿನಿಂದಲೂ ಹೂಗಳಿಂದ ಹೊಮ್ಮುವ ಪರಾಗ ಕಣಗಳ ಅಲರ್ಜಿ ಇತ್ತು. ಆದರೆ ಅದು ಅವರಿಗೆ ಗೊತ್ತಿರಲಿಲ್ಲ. ಬೆಂಗಳೂರಿನಲ್ಲಿ ಮೇ ಫ್ಲವರ್, ಆಕಾಶಮಲ್ಲಿಗೆ, ಸ್ಪೆಥೊಡಿಯಾ, ರೇನ್ ಟ್ರೀ, ತಬೂಬಿಯಾ

ಮರಗಳಲ್ಲಿ ಟನ್‌ಗಟ್ಟಲೆ ಹೂ ಅರಳಿದಾಗ ಅವರು ಕೆಲಮಟ್ಟಿಗೆ ಹಿಂಸೆ ಅನುಭವಿಸುತ್ತಿದ್ದರು. ನಗರದ ಗಾಳಿ ಬೇಡವೆಂದು ಹಳ್ಳಿಯಲ್ಲಿ ಮನೆಕಟ್ಟಿ ವಾಸಿಸತೊಡಗಿದರು. ಅಲ್ಲಿ ಹೂಗಿಡಗಳನ್ನು ಬೆಳೆಸಿದರು. ಸುತ್ತಲಿನ ರೈತರೆಲ್ಲ ಭೂಮಿ ಮಾರುವ ಆಸೆಯಿಂದ ಕೃಷಿ ಕೈಬಿಟ್ಟಿದ್ದರಿಂದ ಅಲ್ಲೆಲ್ಲ ಯಥೇಚ್ಛ ಕಮ್ಯೂನಿಸ್ ಕಳೆ ಹೂಬಿಡುತ್ತಿತ್ತು. ಇದರಿಂದಾಗಿ ಅವರ ಉಬ್ಬಸದ ತೊಂದರೆ ಇನ್ನೂ ಜಾಸ್ತಿಯಾಯಿತು. ಇತ್ತ ಬೆಂಗಳೂರಿನಲ್ಲಿ ರಸ್ತೆ ವಿಸ್ತರಣೆ, ಫ್ಲೈಓವರ್, ಮೆಟ್ರೊ-ತುಳಿರೊ ಮುಂತಾದ ಕಾರಣಗಳಿಂದಾಗಿ ಮರಗಳ ಸಂಖ್ಯೆ ಕಡಿಮೆಯಾಗುತ್ತ ಬಂತು. ಪರಾಗ ಕಣಗಳು ಕಡಿಮೆ ಆಗಿದ್ದೂ ಅಲ್ಲದೆ, ಪರಾಗಗಳನ್ನು ಹೀರಿಕೊಳ್ಳುವವರ ಸಂಖ್ಯೆ (ಶ್ವಾಸಕೋಶಗಳ ಸಂಖ್ಯೆ) ಅಪಾರವಾಗಿ ಹೆಚ್ಚಾಗಿದ್ದರಿಂದ ಗಾಳಿಯಲ್ಲಿ ಪರಾಗಗಳೇ ಇಲ್ಲವೆಂಬಷ್ಟಾಯಿತು. ಹಾಗಾಗಿ ಹೆಗಡೆ ಶ್ರೀಮತಿಯವರಿಗೆ ಹಳ್ಳಿಯ ಹವೆಗಿಂತ ನಗರದಲ್ಲಿ ಉಸಿರಾಟ ಸಲೀಸಾಗಿ ಅನ್ನಿಸತೊಡಗಿತು. ಹಳ್ಳಿಯನ್ನು ಬಿಟ್ಟು ಮತ್ತೆ ನಗರಕ್ಕೆ ಬಂದು ವಾಸಿಸುವುದರಲ್ಲೇ ಅವರ ಸಮಸ್ಯೆಗೆ ಉತ್ತರವಿದೆ.''

– ಹೀಗೆಂದು ಮೌನ ಮುರಿದು ತ್ರಿವಿಕ್ರಮ ಹೇಳಿದ್ದೇ ತಡ, ಆತನ ಹೆಗಲಮೇಲಿದ್ದ ಬೇತಾಳ ಛಂಗನೆ ಮೇಲಕ್ಕೆ ನೆಗೆದು ಫ್ಲೈಓವರ್ ಕಾಂಕ್ರೀಟಿಗೆ ತಲೆ ಬಡಿಸಿಕೊಂಡು ದಿಕ್ಕುತೋಚದಂತಾಗಿ ಕೊಂಬೆ ಇರಬಹುದಾದ ಎತ್ತರದ ಮರವೊಂದನ್ನು ಹುಡುಕುತ್ತ ಚಾಮರಾಜಪೇಟೆ, ಬಸವನಗುಡಿಗಳಲ್ಲಿ ಅಂಡಲೆಯುತ್ತ ತ್ರಿಶಂಕುವಾಯಿತು.

(ಮುಗಿಯಿತು)

---

ಬೀಗರು ಸಿಕ್ಕಾಪಟ್ಟೆ ಕೂಗಾಡುತ್ತಿದ್ದರು. ಏನ್ರೀ ನಿಮ್ಮ ಮಗಳಿಗೆ ಸಂಗೀತ ಬರುತ್ತೆ, ಕಸೂತಿ ಬರುತ್ತೆ, ಅಡಿಗೆ ಬರುತ್ತೆ, ಕಾರು ಡ್ರೈವಿಂಗ್ ಬರುತ್ತೆ ಅಂತೆಲ್ಲಾ ಅಂದಿದ್ರಿ, ಇದು ಸಾಲದು ಅಂತ ಅವಳು ಕೆಲಸದಲ್ಲಿದ್ದಾಳೆ ಸಾವಿರಾರು ರೂಪಾಯಿ ಸಂಪಾದನೆ ಮಾಡ್ತಾಳೆ ಅಂದಿದ್ರಿ ಅಂದರು.

ಅದಿಕ್ಕೆ ಅವರ ಬೀಗರು ಇನ್ನೂ ಒಂಭೈನೂರ ತೊಂಭತ್ತೈದು ಬಾಕಿ ಇದೆ ಅಂದ್ರು.

ಏನ್ರೀ ಅದು ನಿಮ್ಮ ಪಿಂಡ ಅಂತ ರೇಗಿದರೆ....

ಇವರು, ನೋಡಿ ಬೀಗರೇ ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಅಂತ ಗಾದೇನೆ ಇದೆ. ನಾನು ಹೇಳಿರೋದು ಬರೀ ಐದು ಸುಳ್ಳು ಅಷ್ಟೆ, ಮಿಕ್ಕ ಒಂಭೈನೂರ ತೊಂಭತ್ತೈದು ಸುಳ್ಳು ಹೇಳೋಕೆ ನೀವು ಅವಕಾಶವನ್ನೇ ಕೊಡಲಿಲ್ವಲ್ಲ ಅಂದಾಗ ಬೀಗರು ತಲೆ ಚಚ್ಚಿಕೊಂಡು ಹೋದರು.

- **ಸುಕೇಶವ**

# ಡಿಸೆಂಬರ್ 2011

**– ಜ್ಯೋತಿಷಿ ಸತ್ಯೋತ್ತಮಾಚಾರ್ಯ**

***ಮಾಸ ಸೂಕ್ತಿ : ನೀವೆಲ್ಲರೂ 2012ನೇ ಇಸವಿಗೆ ಇನ್ನೇನು ಕಾಲಿಡುತ್ತಿದ್ದೀರಿ. ಹೊಸ ಕ್ಯಾಲೆಂಡರ್ ವರ್ಷದಲ್ಲಿ ನಿಮ್ಮ ಶಕ್ತಿ ಪ್ರಾಬಲ್ಯಗಳು ಹೆಚ್ಚಲಿ! ಆದರೆ ಅವುಗಳ ಮೇಲೆ ನಿಯಂತ್ರಣವೂ ಇರಲಿ-ಇಲ್ಲದಿದ್ದರೆ ನೀವು ಗಡಾಫಿಯಾಗುತ್ತೀರಿ, ಜೋಕೆ!***

**ಮೇಷ :** ನಿಮ್ಮ ರಾಶಿಗೆ ''ಸಾಹಸ'' ಬಲವಿದೆ (ಆದರೆ ಅದಕ್ಕೆ ಅನುಗುಣವಾಗಿ ಇರುವ ದೇಹ ಬಲ ಮಾತ್ರ ಅಷ್ಟಷ್ಟೇ). ಉದಾಹರಣೆಗೆ ನಾಯಿ ಕಂಡರೆ ಭಯವಿಲ್ಲ ಅಂತ ಅದನ್ನು ರೇಗಿಸಬೇಡಿ. ಅದು ನಿಮ್ಮನ್ನು ಕಚ್ಚೋದು ಖಂಡಿತ. ಈಜು ಬರದಿದ್ದರೂ ನೀರಿಗಿಳಿಯಬೇಡಿ. ಒಂದು ಬಕೆಟ್ ನೀರಿನಲ್ಲೂ ಮುಳುಗೋ ಜನ ನೀವು. ''ಶೈವರ್ಲಿ'' ಪ್ರದರ್ಶನಕ್ಕೆಂದು ಯಾವುದಾದರೂ ಸುಂದರ ಸ್ತ್ರೀಯನ್ನು ರಸ್ತೆ ದಾಟಿಸುವುದಕ್ಕೆ ಪ್ರಯತ್ನಿಸಬೇಡಿ. ಆಕೆಯೇನೋ ದಾಟ್ತಾಳೆ. ಆದರೆ ನಿಮಗೆ ಒಂದು ಆಟೋರಿಕ್ಷಾ ಬಂದು ಗುದ್ದೋದಂತೂ ಗ್ಯಾರಂಟಿ.

**ವೃಷಭ :** ನಿಮಗೆ ಮೇಷದವರಿಗಿಂತ ದೇಹ ಬಲ ಜಾಸ್ತಿ (ಆದರೆ ಅಷ್ಟು ಚುರುಕು ಬುದ್ಧಿ ಇರೋದು ಸಂಶಯವೇ...). ಹಾಗಾಗಿ ಗಂಡಸರಾದರೆ ಕುಸ್ತಿ ಮಾಡೋದು, ಬೆಟ್ಟಹತ್ತೋದು, ಕೆಟ್ಟುನಿಂತ ಕಾರನ್ನ ತಳ್ಳೋದು, ಎಮ್ಮೆ ಕಟ್ಟೋದು ಇಂತಹದರಲ್ಲಿ ಪ್ರಸಿದ್ಧರಾಗ್ತೀರಿ. ಹೆಂಗಸರಾದರೆ ಗಂಡನ ಮೇಲೆ ಪಾತ್ರೆ ಎಸೆಯೋದು, ಡಯಟ್ ಮಾಡೋದು, ಹೊಸದಾದ ರೀಬಾಕ್ ಶೂಸ್ ಧರಿಸಿ ವಾಕಿಂಗ್ ಅನ್ನೋ ಹೆಸರಿನಲ್ಲಿ ಮೂಲೇಲಿ ನಿಂತುಕೊಂಡು ಗಂಟೆಗಟ್ಟಲೆ ಹರಟೋದು – ಹೀಗೆ ಮೆದುಳಿಗೆ ತೊಂದರೆ ಕೊಡದೆ ಲವಲವಿಕೆಯಿಂದ ಇರ್ತೀರಾ.

**ಮಿಥುನ :** ನಿಮ್ಮ ರಾಶಿಯವರಿಗೆ ಎಂದೂ ಸಂಪರ್ಕ ಬಲವಿದೆ. ಹೀಗಾಗಿ ಸುಮ್ಮನೆ ಮಾತಾಡುತ್ತಲೇ ಜೀವನ ಸಾಧಿಸ್ತೀರಿ. ಅದಕ್ಕೆ ತಕ್ಕ ಹಾಗೆ ನಿಮ್ಮ ಮಾತನ್ನು ಕೇಳೋಕ್ಕೆ ''ಕುರಿಗಳೂ ಸಿಗುತ್ವೆ.'' ''ಗೌರ್ನರ್ ಇಲ್ಲದ ನಾಲಿಗೆ .....'' ಅಂತ ಯಾವುದೋ ದಾಸವರ್ಯರು ಹೇಳಿದ ಹಾಗೆ ನೀವು ರೇಡಿಯೋ ಜಾಕಿಯಾಗೋ ಅಥವಾ ವಿರೋಧ ಪಕ್ಷದ ರಾಜಕೀಯ ನಾಯಕರಾಗೋ ಪ್ರಸಿದ್ಧರಾಗಬಹುದು.

**ಕಟಕ :** ನಿಮ್ಮ ಗ್ರಹ ಬಲದಲ್ಲಿ ನಿಮಗೆ ದಕ್ಕಿರುವ ಒಂದು ದೊಡ್ಡಗುಣ ಅಂದರೆ: ಮಿಕ್ಕವರು ನಿಮ್ಮಲ್ಲಿ ಇಡುವ ವಿಶ್ವಾಸ. ಎಲ್ಲರೂ ನಿಮ್ಮನ್ನು ನಂಬ್ತಾರೆ. ನಿಮ್ಮನ್ನು ''ನಂಬಿ ಕೆಟ್ಟವರಿಲ್ಲ!'' ಆದರೆ ನಿಮ್ಮಲ್ಲಿರುವ ಪ್ರಾಬ್ಲಮ್ ಏನು ಗೊತ್ತೆ? ನೀವೇನಾದರೂ ಚೀಟಿ ವ್ಯವಹಾರ ನಡೆಸ್ತಿದ್ದರೆ ಅಥವಾ ನೀವು ಇನ್ಯಾರಿಂದಲಾದರೂ ಸಾಲ ಸೋಲ ಮಾಡಿದ್ರೆ, ನಿಮಗೆ ದುಡ್ಡುಕೊಟ್ಟವರು ಪಂಗನಾಮ ಹಾಕ್ಕೊಳ್ಳೋ ಪ್ರಮೇಯವೂ ಇದೆ!

**ಸಿಂಹ :** ಆಹಾ! ಅದೆಂತಹ ರಾಶಿಯಪ್ಪಾ ನಿಮ್ಮದು! ಒಂದು ವಿಧದಲ್ಲಿ ನೀವು ಸಿಂಹವೇ. ಎಲ್ಲದರಲ್ಲೂ ಮುಂದು, ಎಲ್ಲದರಲ್ಲೂ ಉತ್ಸಾಹ, ವಿಶಾಲ ಹೃದಯಿ. ಹೀಗೆ ನೀವೇನೋ ಯಾವಾಗಲೂ ಸಿಂಹಾಸನದಲ್ಲೇ ಕೂತಿರ್ತೀರಿ. ತೊಂದರೆಗಳು ಬರೋದು ನಿಮಗಲ್ಲ – ನಿಮ್ಮ ''ಪ್ರಜೆಗಳಿಗೆ''! ಹಾಗಾಗಿ ನೀವು ನಿಮ್ಮದೇ ಲೋಕದಲ್ಲಿ ವಿಹರಿಸುತ್ತಾ ಇರ್ತೀರಾ.

**ಕನ್ಯ :** ನಿಮಗೆ ಗ್ರಹಬಲವೇನು ಗೊತ್ತೆ? ಅಚ್ಚುಕಟ್ಟುತನ! ಏನು ಮಾಡಿದರೂ ಅದನ್ನು ಸರಿಯಾಗಿ ಮಾಡಬೇಕು ಅನ್ನೋ ಹುಚ್ಚು, ಅದು ಇಷ್ಟೇ ಸಮಯ ಹಿಡಿಯಲಿ, ಅದು ನಿಮಗೆ ಮುಖ್ಯವಲ್ಲ. ಗಂಡನಾದರೆ ಕನ್ನಡಿ ಮುಂದೆ ತಲೆಬಾಚಿಕೊಳ್ತಾನೇ ಇರ್ತೀರಿ. ಅದೇ ಹೆಂಡತಿಯಾದರೆ ಅದೇ ಕನ್ನಡಿಯ ಮುಂದೆ ಸೀರೆ ಉಟ್ಕೊಳ್ತಾನೇ ಇರ್ತೀರಿ. ಹೀಗಾಗಿ ನೀವಿಬ್ಬರೂ ಎಷ್ಟೋ ಮದುವೆ ರಿಸೆಪ್ಷನ್‌ಗಳಿಗೆ ಕೊನೇ

ಬ್ಯಾಚ್ ಊಟಕ್ಕೆ ಹೋಗೊ ಟೈಪ್‌ಗಳು. ಆದರೆ ಜೀವನದಲ್ಲಿ ಅಚ್ಚುಕಟ್ಟುತನ ಒಳ್ಳೆಯದೇ. ಕೀಪ್ ಇಟ್ ಅಪ್.

**ತುಲಾ :** ದಿನ ನಿತ್ಯ ಜೀವನದಲ್ಲೂ ನಿಮ್ಮದು ತಕ್ಕಡಿ ಸ್ವಭಾವವೇ! ಹೀಗೋ ಹಾಗೋ... ಮಾಡಲೋ ಬಿಡಲೋ.. ಬೇಡವೋ ಬೇಕೋ.. ತಿನ್ನಲೋ ಬೇಡವೋ.. ಹೀಗೆ ಎಲ್ಲ ವಿಷಯಗಳನ್ನು ತೂಕ ಹಾಕಿ ನೋಡೋದೇ ನಿಮ್ಮ ಜಾಯಮಾನ. ಇದರಿಂದ ನೀವೇನೂ ಗಹನವಾಗಿ ಸಾಧಿಸದೇ ಇದ್ದರೂ, ನಿಮ್ಮ ವಿವೇಚನಾ ಶಕ್ತಿಯಂತೂ ಯಾವಾಗಲೂ ಚೂಪಾಗಿರುತ್ತೆ ಬಿಡಿ. ಆದರೆ ಟೀವಿ ಮುಂದೆ ಹುಷಾರಾಗಿರಿ. ಆ ಚಾನಲ್ಲೋ ಈಚಾನಲ್ಲೋ ಅಂತ ತಡ ಮಾಡಿದ್ರೆ ಮನೆಯವರಿಂದ ಏಟು ತಿನ್ನಬೇಕಾಗುತ್ತೆ.

**ವೃಶ್ಚಿಕ :** ನೀವು ಭಾವೋದ್ರಿಕ್ತರೂ ಹೌದು; ನಿಮ್ಮ ಸುತ್ತಮುತ್ತಲಿರುವವರ ಮೇಲೆ ಮೋಡಿ ಹಾಕುವರೂ ಹೌದು. ಮಾತು ಮಾತಿಗೆಲ್ಲಾ ಈರುಳ್ಳಿಯ ಸಹಾಯವಿಲ್ಲದೇ ಕಣ್ಣೀರು ಬರಿಸಿಕೊಂಡು, ನಿಮ್ಮ ವಾಕ್‌ಲಹರಿಯಲ್ಲಿ ಎಲ್ಲರನ್ನು ಹಿಡಿಯುವ ಶಕ್ತಿ ನಿಮ್ಮ ಗ್ರಹ ಬಲದಲ್ಲಿದೆ. ಹಾಗಾಗಿ ನಿಮಗೆ ಸಿನಿಮಾ – ಕಿರುತೆರೆಯಲ್ಲಿ ನಟನೆಗೆ ಇಳಿದರೆ ಯಶಸ್ಸು ಖಂಡಿತ. ಅದರಲ್ಲೂ ಅವಳಿ ಜವಳಿ ಮಕ್ಕಳನ್ನು ಕಳೆದುಕೊಂಡ ತಾಯಿಯ ಪಾತ್ರ (ನಂತರ ಅವರಿಬ್ಬರೂ ಸಿಕ್ತಾರೆ ಬಿಡಿ), ಬಡ ಹುಡುಗಿಯ ತಂದೆಯ ಪಾತ್ರ, ಮದುವೆಗೆ ಒಪ್ಪದ ಹುಡುಗನ ತಂದೆಯ ಪಾತ್ರ; ಗಾಂಧಿ ಜಯಂತಿಯ ದಿನ ಹಾಡು ಹೇಳುವ ಸ್ಕೂಲ್ ಟೀಚರ್ ಪಾತ್ರ; ಇಂತಹವಕ್ಕೆ ನಿಮ್ಮ ವ್ಯಕ್ತಿತ್ವ ಹೇಳಿ ಮಾಡಿಸಿದ್ದು!

**ಧನಸ್ಸು :** ನಿಮ್ಮ ಬಲ ನಿಮಗೇ ಗೊತ್ತೇ ಇರುತ್ತೆ – ಅದು ಬುದ್ಧಿ ಬಲ. ಬಲೇ ಚುರುಕು ಬುದ್ಧಿ ನಿಮ್ಮದು ಅದು ಎಷ್ಟು ಉಪಯೋಗಕ್ಕೆ ಬರುತ್ತದೆ ಅಂತ ಚಿಂತಿಸಬೇಡಿ. ಅದಲ್ಲ ಮುಖ್ಯ. ನಿಮ್ಮಿಂದ ಸಮಾಜವೇನೂ ಉದ್ಧಾರವಾಗದಿದ್ದರೂ, ವಾರ್ತಾಪತ್ರಿಕೆಗಳಲ್ಲಿ ಟೀವಿ ಮಾಧ್ಯಮಗಳಲ್ಲಿ ನಿಮ್ಮ ವಿಮರ್ಶೆಗಳು, ಭಾಷಣಗಳು, ಪ್ರತಿಕ್ರಿಯೆಗಳು ಇದ್ದೇ ಇರುತ್ತೆ. ಆದರೆ ಅವು ಯಾರಿಗೂ ಅರ್ಥವಾಗದೇ ಇರೋದರಿಂದ, ನಿಮ್ಮ ಚಿಂತನೆಗಳೆಲ್ಲಾ ಒನ್ ವೇ ಟ್ರಾಫಿಕ್! ಒಟ್ಟಿನಲ್ಲಿ ನೀವು ಹಾಯಾಗಿ ಇರ್ತೀರಿ.

**ಮಕರ :** ಮಕರಗಳೇ, ನೀವೊಂದು ಅಪರೂಪದ ಜಾತಿ. ಯಾಕೆ ಗೊತ್ತೇ? ನೀವು ಕಷ್ಟಪಟ್ಟು ದುಡಿಯೋ ಸ್ವಭಾವದವರು, ಅದಕ್ಕೆ ಹಾಗಾಗಿ ಎಲ್ಲೆಲ್ಲಿ ಕೆಲಸವಾಗಬೇಕೋ ಅಲ್ಲೆಲ್ಲಾ ನಿಮಗೆ ಡಿಮ್ಯಾಂಡಪ್ಪೊ ಡಿಮ್ಯಾಂಡು. ಮಿಕ್ಕದವರ ಕೆಲಸಮಾಡಿ ಕೊಂಡು ಮಕರಗಳು ಬಕರಗಳಾಗಿ ಇರೋದು ಸರ್ವೇಸಾಮಾನ್ಯ. ಬರುವ ವರ್ಷದಲ್ಲಿ ಸ್ವಲ್ಪ ಚಿಂತನೆ ಮಾಡಿ. ನಾವೆಲ್ಲರೂ ಸೋಮಾರಿಗಳಾಗಿ ಜೀವನ ನಡೆಸ್ತಿಲ್ಲವೇ? ನೀವೂ ಸೋಮಾರಿತನವನ್ನು ಸ್ವಲ್ಪ ಕಲಿತುಕೊಳ್ಳಿ.

**ಕುಂಭ :** ನಿಮ್ಮ ಬಲ ''ಸ್ನೇಹಪರತೆ.'' ಎಲ್ಲರ ಜೊತೆಯಲ್ಲೂ ನೀವು ಬಹಳ ಫ್ರೆಂಡ್ಲಿ. ಇದು ಒಳ್ಳೆಯ ಲಕ್ಷಣ ಅಂತ ಅನ್ನಿಸಿಕೊಂಡರೂ, ಯುವಕ ಯುವತಿಯರಿಗೆ ಸಿನಿಮಾಗಳಲ್ಲಿ ಆಗೋ ಹಾಗೆ ಕೆಲವು ಸಂಕಷ್ಟ ಸನ್ನಿವೇಶಗಳು ಬರುತ್ವೆ. ಅಮೇರಿಕಾ ಹತ್ತಿರ ''ಬರ್ಮುಡಾ ಟ್ರಯಾಂಗಲ್''ನಲ್ಲಿ ಹಡಗುಗಳು ಮುಳುಗಿ ಹೋಗಲ್ವೆ? ಹಾಗೇ, ಕುಂಭದವರೇ, ನೀವು ''ಲವ್ ಟ್ರಯಾಂಗಲ್''ನಲ್ಲಿ ಮುಳುಗಿ ಹೋಗೋ ಸಾಧ್ಯತೆಗಳಿವೆ. ಇಂತಹವುಗಳಿಂದ ಈಜುಕೊಂಡು ಮೇಲೆ ಬರೋದು ಕಷ್ಟ ಆದರೆ ಸಂತಸದ ವಿಷಯವೆಂದರೆ ನಿಮ್ಮನ್ನು ಮೆಚ್ಚೋ ಜನ ಹೇರಳವಾಗಿರ್ತಾರೆ.

**ಮೀನ :** ಆಧ್ಯಾತ್ಮಿಕ ಚಿಂತನೆ, ಆಳವಾದ ಜ್ಞಾಪಕ ಶಕ್ತಿ ನಿಮ್ಮ ಮುಖ್ಯ ಗುಣಗಳು. ಹಾಗಾಗಿ ನೀವು ಬೆಂಗಳೂರಿನ ಕನಕಪುರ ರಸ್ತೆಯಲ್ಲೋ ಇನ್ನೆಲ್ಲೋ ಆಶ್ರಮವಾಸಿಗಳೂ ಆಗಬಹುದು, ಅಥವಾ ಆಶ್ರಮವನ್ನೇ ಕಟ್ಟಿಸಬಹುದು. ನಿಮ್ಮನ್ನು ಅರಿಸಿಬರುವ ಶಿಷ್ಯವೃಂದಕ್ಕೆ ಮನಃಶಾಂತಿ ಸಿಕ್ಕದಿದ್ದರೂ ಊಟ ತಿಂಡಿಯಂತೂ ಗ್ಯಾರಂಟಿಯಾಗಿ ಸಿಗುತ್ತೆ. ಅದು ನಿಮ್ಮ ಗ್ರಹ ಬಲ. ಅಗಾಧ ಜ್ಞಾಪಕ ಶಕ್ತಿಯಿಂದಾಗಿ, ಮೊಬೈಲ್ ನಂಬರುಗಳನ್ನೋ, ಸ್ವಿಸ್ ಬ್ಯಾಂಕ್ ಅಕೌಂಟ್ ನಂಬರುಗಳನ್ನೂ ನೀವು ಎಂದೂ ಮರೆಯಲಸಾಧ್ಯ. ಜನಸೇವೆ ಮಾಡುತ್ತ ಪುಣ್ಯಕಟ್ಟಿಕೊಳ್ಳಿ.

ಇತ್ತೀಚೆಗೆ ಬಿಟ್ಟಿ ಕ್ಯಾಲಂಡರುಗಳು ಸಿಗೋದು ಕಷ್ಟ (ಬೆಲೆ ಜಾಸ್ತಿ). ಡಿಸೆಂಬರ್ ಕೊನೆಯ ವಾರದಲ್ಲಿ ನಿಮ್ಮ ಕಣ್ಣು ಕ್ಯಾಲೆಂಡರ್ ಮೇಲೆ ಬೀಳದೇ ಇದ್ದಲ್ಲಿ – ಹ್ಯಾಪಿ ಕ್ರಿಸ್‌ಮಸ್ ಮತ್ತು ಹ್ಯಾಪಿ ನ್ಯೂ ಇಯರ್!